ಅಧ್ಯಾಯ ೩

# ಹಣ ಮತ್ತು ಬ್ಯಾಂಕಿಂಗ್

## *Money and Banking*



ಹಣವು ಸರ್ವೇ ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ವಿನಿಮಯದ ಮಾಧ್ಯಮವಾಗಿದೆ. ಒಬ್ಬನೇ ವ್ಯಕ್ತಿ ಮಾತ್ರ ಇರುವ ಒಂದು ಅರ್ಥವ್ಯವಸ್ಥೆಯಲ್ಲಿ ಸರಕುಗಳ ಯಾವುದೇ ವಿನಿಮಯವಿರುವುದಿಲ್ಲ ಆದ್ದರಿಂದ ಹಣಕ್ಕೆ ಯಾವುದೇ ಪಾತ್ರವೂ ಇರುವುದಿಲ್ಲ. ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಇದ್ದರೂ ಮತ್ತು ಅವರು ಯಾವುದೇ ಮಾರುಕಟ್ಟೆ ವ್ಯವಹಾರದಲ್ಲಿ ಭಾಗಿಯಾಗದೇ ಇದ್ದಲ್ಲಿ ಉದಾಹರಣೆಗೆ ಏಕಾಂತವಾದ ಒಂದು ದ್ವೀಪದಲ್ಲಿ ಒಂದು ಕುಟುಂಬ ವಾಸವಾಗಿರುವಾಗ ಅವರಿಗಾಗಿ ಮಾಡಲು ಹಣಕ್ಕೆ ಯಾವುದೇ ಕೆಲಸವಿರುವುದಿಲ್ಲ. ಆದಾಗ್ಯೂ ಒಂದಕ್ಕಿಂತ ಹೆಚ್ಚು ಆರ್ಥಿಕ ಘಟಕಗಳು ಮಾರುಕಟ್ಟೆಯ ಮೂಲಕ ವ್ಯವಹಾರದಲ್ಲಿ ತೊಡಗಿದ ಕೂಡಲೇ ಹಣವು ವಿನಿಮಯಗಳನ್ನು ಸುಗಮಗೊಳಿಸುವ ಒಂದು ಉಪಕರಣವಾಗುತ್ತದೆ. ಹಣವನ್ನು ಮಾಧ್ಯಮವಾಗಿ ಬಳಸದೇ ನಡೆಯುವ ಆರ್ಥಿಕ ವಿನಿಮಯಗಳನ್ನು ವಸ್ತು ವಿನಿಮಯ (ಸಾಟಿ) ಪದ್ಧತಿ ಎಂದು ಕರೆಯಲಾಗುತ್ತದೆ. ಆದಾಗ್ಯೂ ಇಲ್ಲಿ ಬಯಕೆಗಳ ದ್ವಿಮುಖ ಹೊಂದಾಣಿಕೆಯ ಅಸಂಭವನೀಯತೆ ಇದೆಯೆಂದು ಅವರು ಭಾವಿಸುತ್ತಾರೆ. ಹಾಗೆ ಪರಿಗಣಿಸುವುದಾದರೆ ಉದಾಹರಣೆಗೆ ಒಬ್ಬ ವ್ಯಕ್ತಿಯ ಬಳಿ ಅಧಿಕ ಅಕ್ಕಿಯಿದೆ ಮತ್ತು ಅವಳು ಅದನ್ನು ಬಟ್ಟೆಗೆ ವಿನಿಮಯ ಮಾಡಿಕೊಳ್ಳಲು ಬಯಸಿದ್ದಾಳೆ. ಅವಳಿಗೆ ಆ ಅದೃಷ್ಟವಿಲ್ಲದಿದ್ದರೆ ಅವಳ ಬಯಕೆಗೆ ಸರಿಹೊಂದುವ ಅಧಿಕ ಬಟ್ಟೆ ಹೊಂದಿರುವ ಮತ್ತು ಅಕ್ಕಿಗಾಗಿ ಬೇಡಿಕೆ ಇರುವ ಇನ್ನೊಬ್ಬರು ಸಿಗುವುದೇ ಇಲ್ಲ. ಇಂತಹ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಂತೆ ಶೋಧನಾ ವೆಚ್ಚವು ಪ್ರತಿಬಂಧಕವಾಗುತ್ತದೆ. ಆ ರೀತಿಯಲ್ಲಿ ವ್ಯವಹಾರಗಳನ್ನು ಸುಗಮವಾಗಿಸಲು ಎರಡೂ ಕಡೆಯವರು ಒಪ್ಪಿಕೊಳ್ಳುವಂತಹ ಒಂದು ಮಧ್ಯವರ್ತಿ ವಸ್ತುವಿನ ಅವಶ್ಯಕತೆಯಿದೆ. ಅಂತಹ ವಸ್ತುವನ್ನೇ ಹಣ ಎಂದು ಕರೆಯುತ್ತಾರೆ. ವ್ಯಕ್ತಿಗಳು ತಮ್ಮ ಉತ್ಪನ್ನಗಳನ್ನು ಹಣಕ್ಕೆ ಮಾರಬಹುದು ಮತ್ತು ತಮಗೆ ಅವಶ್ಯವಿರುವ ಸರಕುಗಳನ್ನು ಖರೀದಿಸಲು ಹಣವನ್ನು ಬಳಸಬಹುದು. ವಿನಿಮಯವನ್ನು ಸುಗಮಗೊಳಿಸುವುದನ್ನೇ ಹಣದ ಪ್ರಧಾನ ಪಾತ್ರ ಎಂದು ಪರಿಗಣಿಸಿದರೂ ಇದು ಇನ್ನೂ ಕೆಲವು ಉದ್ದೇಶಗಳನ್ನು ಈಡೇರಿಸುತ್ತದೆ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣದ ಪ್ರಮುಖ ಕಾರ್ಯಗಳು ಈ ಕೆಳಗಿನಂತಿವೆ.

### 3.1 ಹಣದ ಕಾರ್ಯಗಳು *Functions of Money*

ಮೇಲೆ ವಿವರಿಸಿದಂತೆ ವಿನಿಮಯದ **ಮಾಧ್ಯಮ**ವಾಗಿರುವುದೇ ಹಣದ ಪ್ರಥಮ ಮತ್ತು ಅತ್ಯಂತ ಪ್ರಮುಖ ಪಾತ್ರವಾಗಿದೆ. ಬೃಹತ್ ಅರ್ಥವ್ಯವಸ್ಥೆಯಲ್ಲಿ ವಸ್ತು ವಿನಿಮಯ ತುಂಬಾ ಕಷ್ಟ ಏಕೆಂದರೆ ತಮ್ಮಲ್ಲಿರುವ ಅಧಿಕ ವಸ್ತುಗಳನ್ನು ವಿನಿಮಯ ಮಾಡಲು ಯೋಗ್ಯರಾದ ವ್ಯಕ್ತಿಗಳ ಶೋಧಕ್ಕಾಗಿ ಜನರು ಭರಿಸುವ ವೆಚ್ಚ ದುಬಾರಿಯಾಗಿರುತ್ತದೆ.

ಹಣವು ಲೆಕ್ಕದ ಅತ್ಯಂತ ಅನುಕೂಲಕರ ಘಟಕವಾಗಿ ಕಾರ್ಯ ನಿರ್ವಹಿಸುತ್ತದೆ. ಎಲ್ಲಾ ಸರಕು ಮತ್ತು ಸೇವೆಗಳ ಮೌಲ್ಯವನ್ನು ಹಣದ ಘಟಕಗಳಲ್ಲಿ ವ್ಯಕ್ತ ಪಡಿಸಬಹುದಾಗಿದೆ. ಒಂದು ಕೈ ಗಡಿಯಾರದ ಮೌಲ್ಯವು ರೂ.500 ಎಂದಾದರೆ ಅದನ್ನು ಹಣದ 500 ಘಟಕಗಳಿಗೆ ವಿನಿಮಯ ಮಾಡಬಹುದು ಎಂದು ನಾವು ಹೇಳಬಹುದು, ಇಲ್ಲಿ ಒಂದು ರೂಪಾಯಿ ಹಣದ ಒಂದು ಘಟಕವಾಗಿದೆ. ಒಂದು ಪೆನ್ಸಿಲ್‌ನ ಬೆಲೆ ರೂ.2 ಮತ್ತು ಒಂದು ಪೆನ್ನಿನ ಬೆಲೆ ರೂ.10 ಎಂದಾದರೆ ಪೆನ್ಸಿಲ್‌ಗೆ ಸಂಬಂಧಿಸಿದಂತೆ ಪೆನ್ನಿನ ಸಾಪೇಕ್ಷ ಬೆಲೆಯನ್ನು ನಾವು ಲೆಕ್ಕ ಹಾಕಬಹುದು. ಅಂದರೆ ಪೆನ್ನಿನ ಬೆಲೆಯು 10 ಪೆನ್ಸಿಲ್‌ಗಳಾಗುತ್ತವೆ. ಇತರೆ ಸರಕುಗಳಿಗೆ ಸಂಬಂಧಿಸಿದಂತೆ ಹಣದ ಮೌಲ್ಯವನ್ನು ಲೆಕ್ಕ ಹಾಕಲು ಇದೇ ಭಾವನೆಯನ್ನು ಉಪಯೋಗಿಸಬಹುದು. ಮೇಲಿನ ಉದಾಹರಣೆಯಲ್ಲಿ ಒಂದು ರೂಪಾಯಿಯ ಬೆಲೆ 1 ಪೆನ್ಸಿಲ್

ಅಥವಾ 1 ಪೆನ್ ಅಗುತ್ತದೆ. ಆ ರೀತಿಯಲ್ಲಿ ಹಣದ ಲೆಕ್ಕದಲ್ಲಿ ಎಲ್ಲಾ ಸರಕುಗಳ ಬೆಲೆಗಳು ಹೆಚ್ಚಾಗುವುದಾದರೆ, ಇನ್ನೊಂದು ಅರ್ಥದಲ್ಲಿ ಬೆಲೆಗಳ ಮಟ್ಟದಲ್ಲಿ ಸಾಮಾನ್ಯ ಏರಿಕೆಯಾಗಿದೆಯೆಂದಾಗುತ್ತದೆ. ಯಾವುದೇ ಸರಕಿನ ರೂಪದಲ್ಲಿ ಹಣದ ಮೌಲ್ಯವು ಕಡಿಮೆಯಾಗುತ್ತದೆ, ಅಗ ಹಣದ ಒಂದು ಘಟಕವು ಯಾವುದೇ ಸರಕನ್ನು ಕಡಿಮೆ ಪ್ರಮಾಣದಲ್ಲಿ ಕೊಳ್ಳುತ್ತದೆ. ಇದನ್ನೇ ನಾವು ಹಣದ ಶಕ್ತಿಯಲ್ಲಿನ ಕುಸಿತ ಎನ್ನುತ್ತೇವೆ.

ವಸ್ತು ವಿನಿಮಯ ಪದ್ಧತಿಯು ಇತರೆ ಕೊರತೆಗಳನ್ನು ಹೊಂದಿದೆ. ವಸ್ತು ವಿನಿಮಯ ಪದ್ಧತಿಯಲ್ಲಿ ಒಬ್ಬ ವ್ಯಕ್ತಿಯ ಸಂಪತ್ತನ್ನು ವರ್ಗಾಯಿಸಲು ಕಷ್ಟವಾಗುತ್ತಿತ್ತು. ಒಂದೊಮ್ಮೆ ನೀವು ಅಕ್ಕಿಯ ಸಂಗ್ರಹವನ್ನು ಹೊಂದಿದ್ದು ಅದನ್ನು ಈವಾಗಲೇ ಅನುಭೋಗಿಸುವ ಇಚ್ಛೆ ಹೊಂದಿಲ್ಲವೆಂದುಕೊಳ್ಳೋಣ, ಆ ಹೆಚ್ಚುವರಿ ಅಕ್ಕಿಯನ್ನು ಭವಿಷ್ಯದಲ್ಲಿ ಅನುಭೋಗಿಸುವ ಅಥವಾ ಇತರೆ ಸರಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಮಾರಾಟ ಮಾಡಬಹುದಾದ ಆಸ್ತಿಯೆಂದು ನೀವು ಪರಿಗಣಿಸಬಹುದು. ಆದರೆ ಅಕ್ಕಿ ನಾಶವಾಗುವ ಸರಕಾಗಿದ್ದು ಒಂದು ನಿರ್ಧಿಷ್ಟ ಅವಧಿಯನ್ನು ಮೀರಿ ಸಂಗ್ರಹಿಸಿಡಲು ಸಾಧ್ಯವಿಲ್ಲ. ಅಲ್ಲದೆ ಅಕ್ಕಿಯ ಸಂಗ್ರಹಣೆಗೆ ತುಂಬಾ ಸ್ಥಳಾವಕಾಶದ ಅವಶ್ಯಕತೆಯಿದೆ. ಇತರೆ ಸರಕುಗಳನ್ನು ಖರೀದಿಸಲು ನಿಮ್ಮ ಅಕ್ಕಿಯ ದಾಸ್ತಾನನ್ನು ವಿನಿಮಯ ಮಾಡಲು ಬಯಸಿದಲ್ಲಿ, ಅಕ್ಕಿಗಾಗಿ ಬೇಡಿಕೆಯುಳ್ಳ ಜನರನ್ನು ಹುಡುಕಲು ನೀವು ಸಾಕಷ್ಟು ಸಮಯ ಮತ್ತು ಸಂಪನ್ಮೂಲವನ್ನು ವ್ಯಯಿಸಬೇಕಾಗುತ್ತದೆ. ನೀವು ಹಣಕ್ಕಾಗಿ ನಿಮ್ಮ ಅಕ್ಕಿಯನ್ನು ಮಾರಾಟ ಮಾಡಿದರೆ ಈ ಸಮಸ್ಯೆಯನ್ನು ಪರಿಹರಿಸಬಹುದು. ಹಣವು ನಾಶವಾಗುವಂತಹುದಲ್ಲ ಮತ್ತು ಅದರ ದಾಸ್ತಾನು ವೆಚ್ಚ ಕೂಡಾ ಗಣನೀಯವಾಗಿ ಕಡಿಮೆ. ಇದನ್ನು ಯಾವುದೇ ಸಮಯದಲ್ಲೂ ಯಾವುದೇ ವ್ಯಕ್ತಿಯೂ ಒಪ್ಪಿಕೊಳ್ಳಬಹುದಾಗಿದೆ. ಹೀಗೆ ವ್ಯಕ್ತಿಗಳಿಗೆ ಹಣವು ಮೌಲ್ಯದ ಸಂಗ್ರಾಹಕವಾಗಿ ಕಾರ್ಯ ನಿರ್ವಹಿಸುತ್ತದೆ. ಭವಿಷ್ಯದ ಉಪಯೋಗಕ್ಕಾಗಿ ಸಂಪತ್ತನ್ನು ಹಣದ ರೂಪದಲ್ಲಿ ಸಂಗ್ರಹಿಸಿಡಬಹುದು. ಆದಾಗ್ಯೂ ಈ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಲು ಹಣದ ಮೌಲ್ಯವು ಸ್ಥಿರವಾಗಿರಲೇಬೇಕು. ಏರುತ್ತಿರುವ ಬೆಲೆಗಳ ಮಟ್ಟವು ಹಣದ ಕೊಳ್ಳುವ ಶಕ್ತಿಯನ್ನು ನಾಶ ಪಡಿಸಬಹುದು. ಹಣವಲ್ಲದೇ ಇತರೆ ಯಾವುದೇ ಆಸ್ತಿಯೂ ಮೌಲ್ಯದ ಸಂಗ್ರಾಹಕವಾಗಿ ಕಾರ್ಯ ನಿರ್ವಹಿಸಬಲ್ಲದು ಎಂಬುದನ್ನು ಗಮನಿಸಬಹುದಾಗಿದೆ, ಉದಾ: ಬಂಗಾರ, ಭೂ ಸ್ಥಿರಾಸ್ತಿಗಳು, ಗೃಹಗಳು ಅಥವಾ ಬಾಂಡುಗಳೂ (ಶೀಘ್ರದಲ್ಲಿ ಪರಿಚಯಿಸಲಾಗುತ್ತದೆ). ಆದಾಗ್ಯೂ ಅವುಗಳನ್ನು ಇತರೆ ಸರಕುಗಳಿಗೆ ಸುಲಭವಾಗಿ ಪರಿವರ್ತಿಸಲು ಸಾಧ್ಯವಿಲ್ಲ ಮತ್ತು ಸಾರ್ವತ್ರಿಕ ಒಪ್ಪಿಗೆಯನ್ನೂ ಹೊಂದಿಲ್ಲ.

ಹಣದ ಬಳಕೆಯನ್ನು ಕಡಿಮೆ ಮಾಡಿ ಮತ್ತು ಹೆಚ್ಚು ಡಿಜಿಟಲ್ ವಹಿವಾಟುಗಳುಳ್ಳ ಆರ್ಥಿಕತೆಯ ಕಡೆಗೆ ಸಾಗಲು ಕೆಲವು ದೇಶಗಳು ಪ್ರಯತ್ನಿಸುತ್ತಿವೆ. ನಗದು ರಹಿತ ಸಮಾಜವನ್ನು ವಿವರಿಸುವುದಾದರೆ ಭೌತಿಕ ಬ್ಯಾಂಕ್ ನೋಟುಗಳು ಮತ್ತು ನಾಣ್ಯಗಳ ರೂಪದ ಹಣಕ್ಕೆ ಸಂಬಂಧ ಪಡದೆ ವಹಿವಾಟು ನಡೆಸುವ ಪಾಟಿಗಳ ನಡುವಿನ ಹಣಕಾಸಿನ ವಹಿವಾಟುಗಳನ್ನು ಡಿಜಿಟಲ್ ವರ್ಗಾವಣೆಯ ಮಾಹಿತಿಗಳ (ಸಾಮಾನ್ಯವಾಗಿ ಹಣದ ಒಂದು ವಿದ್ಯುನ್ಮಾನ ಪ್ರತಿನಿಧಿ) ಮೂಲಕ ನಿರ್ವಹಿಸುವ ಒಂದು ಆರ್ಥಿಕ ಸ್ಥಿತಿಯಾಗಿದೆ. ಭಾರತದಲ್ಲಿ ಸರಕಾರವು ಹೆಚ್ಚಿನ ಹಣಕಾಸಿನ ಒಳಗೊಳ್ಳುವಿಕೆಗಾಗಿ ವಿವಿಧ ಸುಧಾರಣೆಗಳಲ್ಲಿ ಸತತವಾಗಿ ಹೂಡಿಕೆಯನ್ನು ಮಾಡುತ್ತಿದೆ. ಕಳೆದ ಕೆಲವು ವರ್ಷಗಳ ಅವಧಿಯಲ್ಲಿ ಜನಧನ್ ಖಾತೆ, ಆಧಾರ್ ಆಧಾರಿತ ಪಾವತಿ ವ್ಯವಸ್ಥೆ, ಇ–ವ್ಯಾಲೆಟ್, ರಾಷ್ಟ್ರೀಯ ಹಣಕಾಸು ಸ್ವಿಚ್ (NFS) ಮುಂತಾದ ಉಪಕ್ರಮಗಳು ಹಣರಹಿತ ವ್ಯವಸ್ಥೆಯೆಡೆಗೆ ಸಾಗುವ ಸರಕಾರದ ನಿರ್ಧಾರವನ್ನು ಬಲಪಡಿಸಿದೆ. ಇಂದು ದೇಶಾದ್ಯಂತ ಒಳ ನುಗ್ಗಿರುವ ಮೊಬೈಲ್ ಮತ್ತು ಸ್ಮಾರ್ಟ್‌ಫೋನ್‌ಗಳಿಂದಾಗಿ ಹಣಕಾಸಿನ ಸೇರ್ಪಡೆಯು ಒಂದು ವಾಸ್ತವಿಕ ಕನಸಾಗಿದೆ ಎಂದು ಕಂಡು ಬರುತ್ತಿದೆ.

## 3.2 ಹಣದ ಬೇಡಿಕೆ ಮತ್ತು ಪೂರೈಕೆ *Demand and Supply of Money*

### 3.2.1: ಹಣದ ಬೇಡಿಕೆ *Demand for Money*

ಯಾವುದಕ್ಕಾಗಿ ಜನರು ನಿರ್ಧಿಷ್ಟ ಮೊತ್ತದ ಹಣವನ್ನು ಅಪೇಕ್ಷಿಸುತ್ತಾರೆ ಎನ್ನುವುದನ್ನು ಹಣದ ಬೇಡಿಕೆಯು ತಿಳಿಸುತ್ತದೆ. ವಹಿವಾಟನ್ನು ನಿರ್ವಹಿಸಲು ಹಣವು ಅವಶ್ಯಕವಾಗಿರುವುದರಿಂದ, ಜನರು ಇಟ್ಟುಕೊಳ್ಳಲು ಬಯಸುವ ಹಣವನ್ನು ವಹಿವಾಟಿನ ಮೌಲ್ಯವು ನಿರ್ಧರಿಸುತ್ತದೆ: ಮಾಡಲಾಗುವ ವಹಿವಾಟಿನ ಪ್ರಮಾಣವು

ಹೆಚ್ಚಾಗಿದ್ದರೆ ಹಣದ ಬೇಡಿಕೆಯ ಪ್ರಮಾಣವೂ ಹೆಚ್ಚಾಗಿರುತ್ತದೆ. ಮಾಡಲಾಗುವ ವಹಿವಾಟಿನ ಪ್ರಮಾಣವು ಆದಾಯವನ್ನು ಅವಲಂಬಿಸಿರುವುದರಿಂದ ಆದಾಯದಲ್ಲಿನ ಏರಿಕೆಯು ಹಣದ ಬೇಡಿಕೆಯ ಹೆಚ್ಚಳಕ್ಕೂ ಕಾರಣವಾಗುತ್ತದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಹಣವನ್ನು ಬ್ಯಾಂಕಿನಲ್ಲಿಟ್ಟರೆ ಅದು ಬಡ್ಡಿಯನ್ನು ನೀಡುತ್ತದೆ ಅದರ ಬದಲು ಜನರು ತಮ್ಮ ಉಳಿತಾಯವನ್ನು ಹಣದ ರೂಪದಲ್ಲಿಯೇ ಇಟ್ಟುಕೊಳ್ಳಲು ಬಯಸುತ್ತಾರೆ, ಜನರು ಎಷ್ಟು ಹಣವನ್ನು ಇಟ್ಟುಕೊಳ್ಳುತ್ತಾರೆ ಎನ್ನುವುದು ಬಡ್ಡಿಯ ದರವನ್ನೂ ಕೂಡಾ ಅವಲಂಬಿಸಿದೆ. ನಿರ್ದಿಷ್ಟವಾಗಿ, ಯಾವಾಗ ಬಡ್ಡಿಯ ದರವು ಹೆಚ್ಚಾಗುತ್ತದೆಯೋ ಹಣವನ್ನು ಇಟ್ಟುಕೊಳ್ಳುವ ಜನರ ಆಸಕ್ತಿಯು ಕಡಿಮೆಯಾಗುತ್ತದೆ ಏಕೆಂದರೆ ಹಣವನ್ನು ಇಟ್ಟುಕೊಳ್ಳುವುದರಿಂದ ಬಡ್ಡಿ ಗಳಿಸುವ ಠೇವಣಿಯ ಪ್ರಮಾಣವೂ ಕಡಿಮೆಯಾಗುತ್ತದೆ ಮತ್ತು ಆ ರೀತಿಯಲ್ಲಿ ಕಡಿಮೆ ಬಡ್ಡಿಯನ್ನು ಪಡೆಯುತ್ತಾರೆ. ಆದ್ದರಿಂದ ಅಧಿಕ ಬಡ್ಡಿ ದರದಲ್ಲಿ ಹಣದ ಬೇಡಿಕೆಯು ಕಡಿಮೆಯಾಗುತ್ತದೆ.

### 3.2.2: ಹಣದ ಪೂರೈಕೆ *Supply of Money*

ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣವು, ನಗದು ಮತ್ತು ಬ್ಯಾಂಕ್ ಠೇವಣಿಗಳನ್ನು ಒಳಗೊಂಡಿರುತ್ತದೆ. ಯಾವ ಯಾವ ಬಗೆಯ ಬ್ಯಾಂಕ್ ಠೇವಣಿಗಳನ್ನು ಒಳಗೊಂಡಿದೆ ಎಂಬುದರ ಮೇಲೆ ಹಣದ ಹಲವು ಮಾಪನಗಳು ಅವಲಂಬಿತವಾಗಿದೆ.[1] ಇವುಗಳು ಎರಡು ಬಗೆಯ ಸಂಸ್ಥೆಗಳನ್ನು ಒಳಗೊಂಡಿರುವ ವ್ಯವಸ್ಥೆಯಿಂದ ರಚಿತವಾಗಿದೆ: ಅರ್ಥಿಕತೆಯ ಕೇಂದ್ರ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕುಗಳ ವ್ಯವಸ್ಥೆ.

#### ಕೇಂದ್ರ ಬ್ಯಾಂಕ್ – *Central Bank*





ಒಂದು ಆಧುನಿಕ ಅರ್ಥವ್ಯವಸ್ಥೆಯಲ್ಲಿ ಕೇಂದ್ರ ಬ್ಯಾಂಕ್ ಪ್ರಮುಖ ಸಂಸ್ಥೆಯಾಗಿದೆ. ಬಹುತೇಕವಾಗಿ ಪ್ರತಿಯೊಂದು ದೇಶವೂ ಒಂದು ಕೇಂದ್ರ ಬ್ಯಾಂಕನ್ನು ಹೊಂದಿದೆ. ಭಾರತವು ತನ್ನ ಕೇಂದ್ರ ಬ್ಯಾಂಕನ್ನು 1935 ರಲ್ಲಿ ಹೊಂದಿತು. ಅದರ ಹೆಸರೇ 'ಭಾರತೀಯ ರಿಸರ್ವ್ ಬ್ಯಾಂಕ್'. ಕೇಂದ್ರ ಬ್ಯಾಂಕ್ ಹಲವು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ. ಇದು ದೇಶದ ಕರೆನ್ಸಿ (ಹಣ)ಯನ್ನು ಚಲಾವಣೆಗೆ ತರುತ್ತದೆ. ಇದು ಬ್ಯಾಂಕ್ ದರ, ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆ ಮತ್ತು ಮೀಸಲು ಅನುಪಾತದಲ್ಲಿನ ಬದಲಾವಣೆಯಂತಹ ಹಲವು ಕ್ರಮಗಳ ಮೂಲಕ ದೇಶದ ಹಣದ ಪೂರೈಕೆಯನ್ನು ನಿಯಂತ್ರಿಸುತ್ತದೆ. ಇದು ಸರಕಾರದ ಬ್ಯಾಂಕಾಗಿ ಕಾರ್ಯ ನಿರ್ವಹಿಸುತ್ತದೆ. ಇದು ಅರ್ಥವ್ಯವಸ್ಥೆಯ ವಿದೇಶಿ ವಿನಿಮಯ ಮೀಸಲಿನ ಅಭಿರಕ್ಷಕನಾಗಿದೆ. ಇದು ಬ್ಯಾಂಕಿಂಗ್ ವ್ಯವಸ್ಥೆಯ ಬ್ಯಾಂಕ್ ಆಗಿಯೂ ಕಾರ್ಯ ನಿರ್ವಹಿಸುತ್ತದೆ. ಇವುಗಳನ್ನು ಮುಂದೆ ವಿವರವಾಗಿ ಚರ್ಚಿಸಲಾಗಿದೆ.

ಹಣದ ಪೂರೈಕೆಯ ದೃಷ್ಟಿಕೋನದಿಂದ ನಾವು ಕೇಂದ್ರ ಬ್ಯಾಂಕಿನ ಕರೆನ್ಸಿ ಚಲಾವಣೆಯ ಕಾರ್ಯದ ಮೇಲೆ ಕೇಂದ್ರೀಕರಿಸುವುದು ಅಗತ್ಯವಾಗಿದೆ. ಕೇಂದ್ರ ಬ್ಯಾಂಕ್ ಚಲಾವಣೆಗೆ ತರುವ ಈ ಕರೆನ್ಸಿಯನ್ನು ಸಾರ್ವಜನಿಕರು ಅಥವಾ ವಾಣಿಜ್ಯ ಬ್ಯಾಂಕುಗಳು ಹೊಂದಿರುತ್ತವೆ, ಮತ್ತು ಇದು ಸಾಲದ (ಪತ್ತು) ನಿರ್ಮಾಣದ ಆಧಾರವಾಗಿ ಕಾರ್ಯ ನಿರ್ವಹಿಸುವುದರಿಂದ ಇದನ್ನು 'ಹಣದ ತಳ' ಅಥವಾ 'ಅಧಿಕ ಶಕ್ತಿಯ ಹಣ' ಅಥವಾ 'ಮೀಸಲು ಹಣ' ಅಥವಾ ಎಂದು ಕರೆಯಲಾಗುತ್ತದೆ.

#### ವಾಣಿಜ್ಯ ಬ್ಯಾಂಕುಗಳು – *Commercial Banks*

ವಾಣಿಜ್ಯ ಬ್ಯಾಂಕುಗಳು ಇನ್ನೊಂದು ಬಗೆಯ ಸಂಸ್ಥೆಗಳಾಗಿದ್ದು ಇವು ಆರ್ಥಿಕತೆಯ ಹಣ–ನಿರ್ಮಾಣ ವ್ಯವಸ್ಥೆಯ ಭಾಗವಾಗಿವೆ. ನಾವು ಮುಂದಿನ ಭಾಗದಲ್ಲಿ ವಾಣಿಜ್ಯ ಬ್ಯಾಂಕಿಂಗ್ ವ್ಯವಸ್ಥೆಯ ಬಗ್ಗೆ ವಿವರವಾಗಿ ನೋಡುತ್ತೇವೆ. ಅವು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುತ್ತವೆ ಮತ್ತು ಸಾಲವನ್ನು ಪಡೆಯಲಿಚ್ಛಿಸುವವರಿಗೆ ಈ ನಿಧಿಯಿಂದ ಸಾಲವನ್ನು ನೀಡುತ್ತವೆ. ಬ್ಯಾಂಕುಗಳು ಠೇವಣಿದಾರರಿಗೆ ಪಾವತಿಸುವ ಬಡ್ಡಿಯ ದರವು ಸಾಲಗಾರರಿಗೆ ವಿಧಿಸುವ ದರಕ್ಕಿಂತ ಕಡಿಮೆಯಿರುತ್ತದೆ. ಈ ಎರಡೂ ಬಗೆಯ ಬಡ್ಡಿ ದರಗಳ ನಡುವಿನ ವ್ಯತ್ಯಾಸವನ್ನು 'ಹರವು' ಎಂದು ಕರೆಯಲಾಗುತ್ತದೆ ಮತ್ತು ಇದು ಬ್ಯಾಂಕುಗಳು ವಿನಿಯೋಗಿಸುವ ಲಾಭವಾಗಿದೆ.

---

[1] ಅಧ್ಯಾಯದ ಕೊನೆಯಲ್ಲಿರುವ ಹಣದ ಪೂರೈಕೆಯ ಮಾಪನಗಳ ಮೇಲಿನ ಪಟ್ಟಿಗೆಯನ್ನು ನೋಡಿ.

ಬ್ಯಾಂಕುಗಳಿಂದಾಗುವ ಠೇವಣಿ ಮತ್ತು ಸಾಲದ (ಪತ್ತು) ನಿರ್ಮಾಣದ ಪ್ರಕ್ರಿಯೆಯನ್ನು ಈ ಕೆಳಗೆ ವಿವರಿಸಲಾಗಿದೆ. ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ ನಾವು ಒಂದು ಕಥೆಯನ್ನು ಚರ್ಚಿಸೋಣ.

ಒಮ್ಮೆ ಒಂದು ಹಳ್ಳಿಯಲ್ಲಿ ಲಾಲಾ ಎಂಬ ಹೆಸರಿನ ಒಬ್ಬ ಅಕ್ಕಸಾಲಿಗನಿದ್ದ. ಈ ಹಳ್ಳಿಯಲ್ಲಿ ಜನರು ಸರಕು ಮತ್ತು ಸೇವೆಗಳನ್ನು ಖರೀದಿಸಲು ಬಂಗಾರ ಮತ್ತು ಇತರೆ ಅಮೂಲ್ಯವಾದ ಲೋಹಗಳನ್ನು ಬಳಸುತ್ತಿದ್ದರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಲೋಹಗಳು ಹಣವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಹಳ್ಳಿಯ ಜನರು ತಮ್ಮಲ್ಲಿದ್ದ ಬಂಗಾರವನ್ನು ಸುರಕ್ಷಿತವಾಗಿರಿಸಲು ಲಾಲಾನ ಬಳಿ ಇಡುವುದಕ್ಕೆ ಪ್ರಾರಂಭಿಸಿದರು. ಇದಕ್ಕೆ ಪ್ರತಿಯಾಗಿ ಅವರ ಬಂಗಾರವನ್ನು ಇಟ್ಟುಕೊಂಡಿದ್ದಕ್ಕೆ ಲಾಲಾ ಕಾಗದದ ರಸೀದಿಯನ್ನು ಹಳ್ಳಿಯ ಜನರಿಗೆ ನೀಡುತ್ತಿದ್ದ ಮತ್ತು ಅವರಿಂದ ಸಣ್ಣ ಮೊತ್ತದ ಶುಲ್ಕವನ್ನು ಪಡೆಯುತ್ತಿದ್ದ. ಕಾಲಾನಂತರದಲ್ಲಿ ನಿಧಾನವಾಗಿ ಲಾಲಾ ನೀಡಿದ್ದ ಕಾಗದದ ರಸೀದಿಗಳೇ ಹಣವಾಗಿ ಚಲಾವಣೆಯಾಗಲು ಪ್ರಾರಂಭಿಸಿತು. ಇದರರ್ಥ ಏನೆಂದರೆ ಗೋಧಿಯ ಖರೀದಿಗಾಗಿ ಬಂಗಾರವನ್ನು ನೀಡುವುದರ ಬದಲು, ಗೋಧಿಗಾಗಿ ಅಥವಾ ಶೂಗಾಗಿ ಅಥವಾ ಯಾವುದೇ ಸರಕಿಗೆ ಲಾಲಾ ನೀಡಿದ ಕಾಗದದ ರಸೀದಿಯನ್ನು ನೀಡಿ ಯಾರಾದರೂ ಪಾವತಿಸಬಹುದಿತ್ತು. ಹೀಗೆ ಹಳ್ಳಿಯ ಪ್ರತಿಯೊಬ್ಬರೂ ಇವುಗಳನ್ನು ವಿನಿಮಯದ ಮಾಧ್ಯಮವಾಗಿ ಒಪ್ಪಿಕೊಂಡಿದ್ದರಿಂದ ಕಾಗದದ ರಸೀದಿಗಳು ಹಣವಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು.

ಈಗ ಬೇರೆ ಬೇರೆ ಜನರು ಠೇವಣಿಯಿಟ್ಟಿರುವ 100 ಕೆ.ಜಿಯಷ್ಟು ಬಂಗಾರ ಲಾಲಾನ ಬಳಿ ಇದೆಯೆಂದೂ ಮತ್ತು ಅವನು 100 ಕೆ.ಜಿ ಬಂಗಾರಕ್ಕೆ ಅನುಗುಣವಾದ ರಸೀದಿಯನ್ನು ನೀಡಿದ್ದಾನೆ ಎಂದು ನಾವು ಊಹಿಸೋಣ. ಈ ಸಮಯದಲ್ಲಿ ರಾಮು ಲಾಲಾನ ಬಳಿ ಬಂದು 25 ಕೆ.ಜಿ. ಬಂಗಾರವನ್ನು ಸಾಲವಾಗಿ ಕೇಳುತ್ತಾನೆ. ಅವನ ಬಳಿ ಈಗಾಗಲೇ ಇರುವ 100 ಕೆ.ಜಿ. ಬಂಗಾರಕ್ಕೆ ಹಕ್ಕುದಾರರು ಇರುವಾಗ ಲಾಲಾ ಸಾಲ ನೀಡಬಹುದೆ? ಆದಾಗ್ಯೂ ಬಂಗಾರವನ್ನು ಠೇವಣಿಯಿಟ್ಟಿರುವ ಪ್ರತಿಯೊಬ್ಬರೂ ಏಕ ಕಾಲಕ್ಕೆ ಅವರ ಠೇವಣಿಯನ್ನು ವಾಪಾಸು ಪಡೆಯಲು ಬರಲಾರರು ಎಂದು ಲಾಲಾ ತೀರ್ಮಾನಿಸಿ ರಾಮುವಿಗೆ ಸಾಲ ನೀಡಬಹುದು ಮತ್ತು ಅದಕ್ಕೆ ದರವನ್ನೂ ವಿಧಿಸಬಹುದು. ಲಾಲಾ 25.ಕೆ.ಜಿ ಬಂಗಾರವನ್ನು ಸಾಲವಾಗಿ ನೀಡಿದರೆ, ರಾಮು ಆಲಿಗೆ ಕೂಡಾ ಈ 25.ಕೆ.ಜಿ. ಬಂಗಾರವನ್ನು ಪಾವತಿಸಬಹುದು ಮತ್ತು ಆಲಿ 25.ಕೆ.ಜಿ ಬಂಗಾರವನ್ನು ಲಾಲಾನ ಬಳಿಯೇ ಇಟ್ಟು ಅದಕ್ಕೆ ಪ್ರತಿಯಾಗಿ ಕಾಗದದ ರಸೀದಿಯನ್ನು ಪಡೆಯಬಹುದು. ಇದರ ಪರಿಣಾಮವಾಗಿ ಹಣವಾಗಿ ಕಾರ್ಯ ನಿರ್ವಹಿಸುವ ಕಾಗದದ ರಸೀದಿಗಳ ಸಂಖ್ಯೆ 125.ಕೆ.ಜಿ.ಗಳಿಗೆ ಏರಿದೆ. ಅಂದರೆ ಲಾಲಾ ಗಾಳಿಯಿಂದ ಹಣವನ್ನು ಸೃಷ್ಟಿಸಿದಂತೆ ಕಾಣುತ್ತದೆ. ಈ ಉದಾಹರಣೆಯಲ್ಲಿ ಲಾಲಾ ಮಾಡಿದ ರೀತಿಯಲ್ಲಿಯೇ ಆಧುನಿಕ ಬ್ಯಾಕಿಂಗ್ ವ್ಯವಸ್ಥೆ ನಿಖರವಾಗಿ ಕೆಲಸ ಮಾಡುತ್ತದೆ.

ವಾಣಿಜ್ಯ ಬ್ಯಾಂಕುಗಳು ಹೆಚ್ಚುವರಿ ಹಣದೊಂದಿಗೆ, ಹಣದ ಅಗತ್ಯವಿರುವವರಿಗೆ ಸಾಲ ನೀಡುತ್ತಾ ವ್ಯಕ್ತಿಗಳು ಅಥವಾ ಉದ್ಯಮಗಳ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುತ್ತವೆ. ಹೆಚ್ಚುವರಿ ಹಣವನ್ನು ಹೊಂದಿರುವ ಜನರು ಠೇವಣಿಗಳ ರೂಪದಲ್ಲಿ ಬ್ಯಾಂಕಿನಲ್ಲಿಡುತ್ತಾರೆ ಮತ್ತು ಹಣದ ಅವಶ್ಯಕತೆಯಿರುವವರು ಗೃಹ ಸಾಲ, ಬೆಳೆ ಸಾಲ ಇತ್ಯಾದಿಗಳ ರೂಪದಲ್ಲಿ ಸಾಲವನ್ನು ಪಡೆಯುತ್ತಾರೆ. ಜನರು ಬ್ಯಾಂಕಿನಲ್ಲಿ ಹಣವನ್ನು ಇಡಲು ಬಯಸುತ್ತಾರೆ, ಏಕೆಂದರೆ ಇಡಲಾಗಿರುವ ಯಾವುದೇ ಠೇವಣಿಗಳ ಮೇಲೆ ಬ್ಯಾಂಕುಗಳು ಕೆಲವು (ಸ್ವಲ್ಪ) ಬಡ್ಡಿಯನ್ನು ನೀಡುತ್ತವೆ. ಮನೆಯಲ್ಲಿ ಇಡುವುದಕ್ಕಿಂತ ಹಣವನ್ನು ಬ್ಯಾಂಕಿನಲ್ಲಿ ಇಡುವುದೇ ಹೆಚ್ಚು ಸುರಕ್ಷಿತ, ಇದು ಹೇಗೆಂದರೆ ಮೇಲಿನ ಉದಾಹರಣೆಯಲ್ಲಿ ಜನರು ಬಂಗಾರವನ್ನು ಮನೆಯಲ್ಲಿ ಇಡುವುದಕ್ಕಿಂತ ಲಾಲಾನ ಬಳಿ ಇಡಲು ಬಯಸಿದಂತೆ. ಆಧುನಿಕ ಸಂದರ್ಭದಲ್ಲಿ ನೀಡಲಾಗಿರುವ ಚೆಕ್ಕುಗಳು ಮತ್ತು ಡೆಬಿಟ್ ಕಾರ್ಡ್‌ಗಳು, ಹೊಂದಿರುವಂತಹ ಬೇಡಿಕೆ ಠೇವಣಿಗಳು ಯಾವುದೇ ಬಡ್ಡಿಯನ್ನು ಗಳಿಸದೇ ಇದ್ದಾಗ್ಯೂ ವಹಿವಾಟುಗಳನ್ನು ಹೆಚ್ಚು ಅನುಕೂಲಕರ ಮತ್ತು ಸುರಕ್ಷಿತವಾಗಿಸಿವೆ. (ಮನೆಯನ್ನು ಖರೀದಿಸಲು ದೊಡ್ಡ ಮೊತ್ತವನ್ನು ನಗದು ರೂಪದಲ್ಲಿ ಪಾವತಿಸುವುದನ್ನು ಊಹಿಸಿಕೊಳ್ಳಿ)

ಬ್ಯಾಂಕಿನಲ್ಲಿ ಠೇವಣಿಯಾಗಿ ಇಟ್ಟಿರುವ ಹಣದಿಂದ ಬ್ಯಾಂಕು ಏನು ಮಾಡುತ್ತವೆ? ಠೇವಣಿ ಇಟ್ಟಿರುವವರಲ್ಲಿ ಪ್ರತಿಯೊಬ್ಬರೂ ಏಕ ಕಾಲಕ್ಕೆ ಹಣವನ್ನು ಹಿಂದಕ್ಕೆ ಕೇಳುವುದಿಲ್ಲಾ ಎನ್ನುವ ಊಹೆಯೊಂದಿಗೆ ಹಣದ

ಅವಶ್ಯಕತೆಯಿರುವವರಿಗೆ ಬಡ್ಡಿಗಾಗಿ ಈ ಠೇವಣಿಯಿಂದ ಸಾಲವನ್ನು ನೀಡುತ್ತವೆ (ಅಗತ್ಯವಿರುವ ಸಮಯದಲ್ಲಿ ಹಣವನ್ನು ಮರಳಿ ಪಡೆಯುವ ಖಾತರಿಯನ್ನು ಬ್ಯಾಂಕುಗಳು ಖಂಡಿತವಾಗಿಯೂ ಹೊಂದಿರಬೇಕು). ಆದ್ದರಿಂದ ಠೇವಣಿದಾರರು ಯಾವುದೇ ಸಮಯದಲ್ಲಿ ತಮ್ಮ ಹಣವನ್ನು ವಾಪಾಸು ಕೇಳಿದಾಗ ಮರುಪಾವತಿಸಲು ಸಾಧ್ಯವಾಗುವಂತೆ ಬ್ಯಾಂಕುಗಳು ಠೇವಣಿಯ ಒಂದು ಭಾಗವನ್ನು ವಿಶೇಷವಾಗಿ ತಮ್ಮಲ್ಲಿಯೇ ಉಳಿಸಿಕೊಂಡು ಉಳಿದ ಭಾಗವನ್ನು ಸಾಲವಾಗಿ ನೀಡುತ್ತದೆ. ಬ್ಯಾಂಕುಗಳು ತಾವು ನೀಡಿದ ಸಾಲದ ಮೇಲೆ ಬಡ್ಡಿಯನ್ನು ಗಳಿಸುವುದರಿಂದ ಯಾವುದೇ ಬ್ಯಾಂಕು ಸಾಧ್ಯವಾದಷ್ಟು ಗರಿಷ್ಠ ಪ್ರಮಾಣದಲ್ಲಿ ಸಾಲ ನೀಡಲು ಬಯಸುತ್ತವೆ. ಆದಾಗ್ಯೂ ಬೇಡಿಕೆಯ ಮೇರೆಗೆ ಠೇವಣಿದಾರರಿಗೆ ಮರುಪಾವತಿಸಲು ಬ್ಯಾಂಕುಗಳು ಸಮರ್ಥವಾಗಿದೆ ಎನ್ನುವುದು ಬ್ಯಾಂಕಿನ ಉಳಿಯುವಿಕೆಯ ದೃಷ್ಟಿಯಿಂದ ನಿರ್ಣಾಯಕವಾಗಿದೆ. ಬೇಡಿಕೆಯ ಮೇರೆಗೆ ಮರಳಿ ಪಡೆಯಬಹುದು ಎನ್ನುವ ಬಗ್ಗೆ ಸಂಪೂರ್ಣ ವಿಶ್ವಾಸ ಇದ್ದಾಗ ಮಾತ್ರ ಠೇವಣಿದಾರರು ಬ್ಯಾಂಕಿನಲ್ಲಿ ಹಣವನ್ನು ಇಡುತ್ತಾರೆ. ಆದ್ದರಿಂದ ಯಾವುದೇ ಠೇವಣಿದಾರನ ಬೇಡಿಕೆಯ ಮೇರೆಗೆ ಮರುಪಾವತಿಸಲು ಸಾಕಷ್ಟು ಹಣ ಲಭ್ಯವಿದೆ ಎನ್ನುವುದು ಖಾತರಿಯಾಗುವ ರೀತಿಯಲ್ಲಿ ಒಂದು ಬ್ಯಾಂಕು ತನ್ನ ಸಾಲ ನೀಡಿಕೆಯ ಚಟುವಟಿಕೆಗಳನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲೇಬೇಕು.

## 3.3 ಬ್ಯಾಂಕಿಂಗ್ ವ್ಯವಸ್ಥೆಯಿಂದ ಹಣದ ನಿರ್ಮಾಣ *Money Creation By Banking System*

ಲಾಲಾನ ಕಥೆಯಲ್ಲಿ ನೀಡಿರುವ ರೀತಿಯಂತೆಯೇ ಬ್ಯಾಂಕುಗಳು ಹಣವನ್ನು ಸೃಷ್ಟಿಸುತ್ತವೆ. ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಎಲ್ಲಾ ಠೇವಣಿದಾರರೂ ಏಕ ಕಾಲದಲ್ಲಿ ತಮ್ಮ ಠೇವಣಿಯನ್ನು ವಾಪಾಸು ಪಡೆಯುವುದಿಲ್ಲ ಎನ್ನುವ ನಿರೀಕ್ಷೆಯೊಂದಿಗೆ ಬ್ಯಾಂಕುಗಳು ಸಾಲವನ್ನು ನೀಡುತ್ತವೆ. ಬ್ಯಾಂಕುಗಳು ಯಾವುದೇ ವ್ಯಕ್ತಿಗೆ ಸಾಲವನ್ನು ನೀಡಿದಾಗ ಅದೇ ವ್ಯಕ್ತಿಯ ಹೆಸರಿನಲ್ಲಿ ಒಂದು ಹೊಸ ಖಾತೆಯನ್ನು ತೆರೆಯಲಾಗುತ್ತದೆ. ಹೀಗೆ ಹಳೆಯ ಠೇವಣಿಗೆ ಹೊಸ ಠೇವಣಿಯು (ಕರೆನ್ಸಿಯೊಂದಿಗೆ) ಅಧಿಕವಾಗಿ ಸೇರಿಕೊಂಡು ಹಣದ ಪೂರೈಕೆಯು ಹೆಚ್ಚಾಗುತ್ತದೆ.

ನಾವು ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ದೇಶದಲ್ಲಿ ಒಂದೇ ಒಂದು ಬ್ಯಾಂಕ್ ಇದೆಯೆಂದು ಭಾವಿಸೋಣ. ಈಗ ನಾವು ಈ ಬ್ಯಾಂಕಿನ ಒಂದು ಕಾಲ್ಪನಿಕ ಆಢಾವೆ ಪತ್ರಿಕೆಯನ್ನು ರಚಿಸೋಣ. ಆಢಾವೆ ಪತ್ರಿಕೆಯೆಂದರೆ ಯಾವುದೇ ಉದ್ಯಮದ ಆಸ್ತಿ ಮತ್ತು ಹೊಣೆಗಾರಿಕೆಯ ದಾಖಲೆ. ಸಾಂಪ್ರದಾಯಿಕವಾಗಿ, ಉದ್ಯಮದ ಆಸ್ತಿಯನ್ನು ಎಡ ಭಾಗದಲ್ಲಿ ಮತ್ತು ಹೊಣೆಗಾರಿಕೆಯನ್ನು ಬಲಭಾಗದಲ್ಲೂ ದಾಖಲಿಸಲಾಗುತ್ತದೆ. ಆಢಾವೆ ಪತ್ರಿಕೆಯ ಎರಡೂ ಭಾಗಗಳೂ ಸಮವಾಗಿರಲೇಬೇಕು ಅಥವಾ ಒಟ್ಟು ಆಸ್ತಿಗಳು ಒಟ್ಟು ಹೊಣೆಗಾರಿಕೆಗೆ ಸಮವಿರಲೇಬೇಕು ಎಂದು ಲೆಕ್ಕಶಾಸ್ತ್ರದ ನಿಯಮಗಳು ಹೇಳುತ್ತವೆ. **ಆಸ್ತಿಗಳು** ಎಂದರೆ ಉದ್ಯಮವು ಹೊಂದಿರುವ ವಸ್ತು ವಿಷಯಗಳು ಅಥವಾ ಉದ್ಯಮವು ಹಕ್ಕು ಕೋರಿಕೆಯ ಮೇರೆಗೆ ಇತರರಿಂದ ಪಡೆಯುವಂತಹವುಗಳಾಗಿರುತ್ತವೆ. ಒಂದು ಬ್ಯಾಂಕಿನ ವಿಷಯದಲ್ಲಿ, ಕಟ್ಟಡಗಳು, ಪೀಠೋಪಕರಣ, ಇತ್ಯಾದಿಗಳಲ್ಲದೆ ಸಾರ್ವಜನಿಕರಿಗೆ ನೀಡಲಾಗಿರುವ ಸಾಲಗಳೂ ಅದರ ಆಸ್ತಿಗಳಾಗಿರುತ್ತವೆ. ಬ್ಯಾಂಕು ಒಬ್ಬ ವ್ಯಕ್ತಿಗೆ ರೂ.100. ಸಾಲವನ್ನು ನೀಡಿದಾಗ ಇದು ರೂ. 100 ಗಾಗಿ ಆ ವ್ಯಕ್ತಿಯ ಮೇಲಿನ ಬ್ಯಾಂಕಿನ ಹಕ್ಕು ಕೋರಿಕೆಯಾಗಿರುತ್ತದೆ. ಇನ್ನೊಂದು ಆಸ್ತಿಯೆಂದರೆ ಬ್ಯಾಂಕ್ ಹೊಂದಿರುವ ಮೀಸಲುಗಳು. (ಮೀಸಲುಗಳು ಎಂದರೆ ವಾಣಿಜ್ಯ ಬ್ಯಾಂಕುಗಳು ಕೇಂದ್ರ ಬ್ಯಾಂಕಿನಲ್ಲಿ, ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ (RBI), ಇಡುವ ಠೇವಣಿಗಳು ಮತ್ತು ಅದರ ನಗದಾಗಿದೆ. ಈ ಮೀಸಲುಗಳ ಸ್ವಲ್ಪ ಭಾಗವನ್ನು ನಗದು ರೂಪದಲ್ಲಿ ಇಡಲಾಗುತ್ತದೆ ಮತ್ತು ಉಳಿದ ಸ್ವಲ್ಪ ಭಾಗವನ್ನು RBI ಬಿಡುಗಡೆ ಮಾಡಿದ ಹಣಕಾಸು ಸಾಧನಗಳ (ಬಾಂಡುಗಳು ಮತ್ತು ಖಜಾನೆ ಹುಂಡಿಗಳು) ರೂಪದಲ್ಲಿ ಇಡಲಾಗುತ್ತದೆ. ಮೀಸಲುಗಳು ನಾವು ಬ್ಯಾಂಕಿನಲ್ಲಿ ಇಡುವ ಠೇವಣಿಗಳಂತೆಯೇ ಇರುತ್ತವೆ. ನಾವು ಠೇವಣಿಗಳನ್ನು ಇಡುತ್ತೇವೆ ಮತ್ತು ಈ ಠೇವಣಿಗಳು ನಮ್ಮ ಆಸ್ತಿಗಳಾಗಿರುತ್ತವೆ ಹಾಗೂ ಅವುಗಳನ್ನು ನಾವು ಹಿಂದಕ್ಕೆ ಪಡೆಯಬಹುದಾಗಿದೆ. ಅದೇ ರೀತಿ ಭಾರತೀಯ ಸ್ಟೇಟ್ ಬ್ಯಾಂಕಿನಂತಹ (SBI) ವಾಣಿಜ್ಯ ಬ್ಯಾಂಕುಗಳು RBI ನಲ್ಲಿ ಠೇವಣಿ ಇಡುತ್ತವೆ ಮತ್ತು ಇವುಗಳನ್ನು ಮೀಸಲುಗಳು ಎಂದು ಕರೆಯಲಾಗುತ್ತದೆ.

ಆಸ್ತಿಗಳು = ಮೀಸಲುಗಳು + ಸಾಲಗಳು

ಯಾವುದೇ ಉದ್ಯಮಕ್ಕೆ, ಅದರ ಸಾಲಗಳು ಅಥವಾ ಅದು ಇತರರಿಗೆ ನೀಡಬೇಕಾಗಿರುವಂತಹವುಗಳು ಹೊಣೆಗಾರಿಕೆಗಳಾಗಿರುತ್ತವೆ. ಒಂದು ಬ್ಯಾಂಕಿಗೆ ಅದರ ಪ್ರಮುಖ ಹೊಣೆಗಾರಿಕೆಯೆಂದರೆ ಜನರು ಅದರಲ್ಲಿ ಇಟ್ಟಿರುವ ಠೇವಣಿಗಳು.

ಹೊಣೆಗಾರಿಕೆಗಳು = ಠೇವಣಿಗಳು

ಲೆಕ್ಕದ ಖಾತೆಯ ಎರಡೂ ಬದಿಗಳೂ ಸಮತೋಲನದಲ್ಲಿರಲೇಬೇಕೆಂದು ಲೆಕ್ಕಶಾಸ್ತ್ರದ ನಿಯಮಗಳು ಹೇಳುತ್ತವೆ. ಆದ್ದರಿಂದ ಆಸ್ತಿಗಳು ಹೊಣೆಗಾರಿಕೆಗಳಿಗಿಂತ ಹೆಚ್ಚಾಗಿದ್ದರೆ ಅವುಗಳನ್ನು ಬಲ ಭಾಗದಲ್ಲಿ ನಿವ್ವಳ ಮೌಲ್ಯ ಎಂದು ದಾಖಲಿಸಲಾಗುತ್ತದೆ.

ನಿವ್ವಳ ಮೌಲ್ಯ = ಆಸ್ತಿಗಳು – ಹೊಣೆಗಾರಿಕೆಗಳು

### 3.3.1: ಒಂದು ಕಾಲ್ಪನಿಕ ಬ್ಯಾಂಕಿನ ಅಢಾವೆ ಪತ್ರಿಕೆ *Balance Sheet of a Fictional Bank*

ಈಗ ನಮ್ಮ ಕಾಲ್ಪನಿಕ ಬ್ಯಾಂಕು ರೂ.100 ರ ಠೇವಣಿ (ಹೊಣೆಗಾರಿಕೆ) ಯೊಂದಿಗೆ ಆರಂಭಗೊಳ್ಳುತ್ತದೆ. ಇದು ಕುಮಾರಿ ಫರ್ನಾಂಡಿಸ್‌ರವರು ಬ್ಯಾಂಕಿನಲ್ಲಿ ರೂ.100ನ್ನು ಠೇವಣಿ ಇಟ್ಟಿರುತ್ತಾರೆ ಏಕೆಂದರೆ ಈ ಬ್ಯಾಂಕ್ ಅದೇ ಮೊತ್ತವನ್ನು RBI ನಲ್ಲಿ ಮೀಸಲಾಗಿ ಠೇವಣಿ ಇಡುತ್ತದೆ ಎಂದು ಭಾವಿಸೋಣ. ಕೋಷ್ಟಕ 3.1 ಅದರ ಅಢಾವೆ ಪತ್ರಿಕೆಯನ್ನು ಪ್ರತಿನಿಧಿಸುತ್ತದೆ.

**3.1 ಬ್ಯಾಂಕಿನ ಅಢಾವೆ ಪತ್ರಿಕೆ**

| ಆಸ್ತಿಗಳು(ಮೂಲಗಳು) | ರೂ (₹) | ಹೊಣೆಗಾರಿಕೆ | ರೂ (₹) |
|---|---|---|---|
| ಮೀಸಲುಗಳು | 100 | ಠೇವಣಿಗಳು | 100 |
| | | ನಿವ್ವಳ ಮೌಲ್ಯ | 0 |
| **ಒಟ್ಟು** | **100** | **ಒಟ್ಟು** | **100** |

ಕರೆನ್ಸಿಯು ಚಲಾವಣೆಯಲ್ಲಿ ಇಲ್ಲಾ ಎಂದು ನಾವು ಕಲ್ಪಿಸಿಕೊಂಡರೆ, ಆಗ ಆರ್ಥಿಕತೆಯ ಒಟ್ಟು ಹಣದ ಪೂರೈಕೆಯು ರೂ.100 ಕ್ಕೆ ಸಮವಾಗಿರುತ್ತದೆ.

$M_1$ = ಕರೆನ್ಸಿ + ಠೇವಣಿಗಳು = 0 + 100 = 100

### 3.3.2: ಸಾಲ (ಪತ್ತು) ನಿರ್ಮಾಣದ ಮತ್ತು ಹಣದ ಗುಣಕದ ಮಿತಿಗಳು *Limits to Credit Creation and Money Multiplier*

ಒಂದೊಮ್ಮೆ ಶ್ರೀ.ಮ್ಯಾಥ್ಯೂ ರೂ.500. ಸಾಲಕ್ಕಾಗಿ ಈ ಬ್ಯಾಂಕಿಗೆ ಬಂದರೆ ನಮ್ಮ ಬ್ಯಾಂಕ್ ಈ ಸಾಲವನ್ನು ನೀಡಬಹುದೇ? ಅದು ಸಾಲವನ್ನು ನೀಡಿದರೆ ಮತ್ತು ಶ್ರೀ.ಮ್ಯಾಥ್ಯೂ ಸಾಲದ ಮೊತ್ತವನ್ನು ಅದೇ ಬ್ಯಾಂಕಿನಲ್ಲಿ ಠೇವಣಿಯಾಗಿ ಇಟ್ಟರೆ ಮತ್ತು ಅದರಿಂದಾಗಿ ಒಟ್ಟು ಬ್ಯಾಂಕ್ ಠೇವಣಿಗಳು ಮತ್ತು ಒಟ್ಟು ಹಣದ ಪೂರೈಕೆ ಹೆಚ್ಚಾಗುತ್ತದೆ. ಬ್ಯಾಂಕುಗಳು ತಮಗೆ ಎಷ್ಟು ಬೇಕೋ ಅಷ್ಟು ಹಣವನ್ನು ಸೃಷ್ಟಿಸುತ್ತಾ ಹೋಗಬಹುದು ಎಂಬುದನ್ನು ಇದು ತೋರಿಸುತ್ತದೆ.

ಆದರೆ ಬ್ಯಾಂಕುಗಳಿಂದಾಗುವ ಹಣದ ಅಥವಾ ಸಾಲದ ಸೃಷ್ಟಿಗೆ ಒಂದು ಮಿತಿ ಇದೆಯೇ? ಹೌದು, ಇದು ಕೇಂದ್ರ ಬ್ಯಾಂಕ್ (RBI) ನಿಂದ ನಿರ್ಧರಿಸಲ್ಪಡುತ್ತದೆ. ಪ್ರತಿಯೊಂದೂ ಬ್ಯಾಂಕು, ಠೇವಣಿಗಳಲ್ಲಿ ನಿರ್ದಿಷ್ಟ ಶೇ. ಮೊತ್ತವನ್ನು ಮೀಸಲಾಗಿ ಇಡಲೇ ಬೇಕೆಂಬುದನ್ನು RBI ನಿರ್ಧರಿಸುತ್ತದೆ. ಯಾವುದೇ ಬ್ಯಾಂಕು 'ಮಿತಿ ಮೀರಿ ಸಾಲ' ನೀಡಿಲ್ಲ ಎನುವುದನ್ನು ಖಾತರಿ ಪಡಿಸಿಕೊಳ್ಳಲು ಇದನ್ನು ಮಾಡಲಾಗುತ್ತದೆ. ಇದು ಒಂದು ಶಾಸನಾತ್ಮಕ ಅಗತ್ಯತೆಯಾಗಿದ್ದು ಮತ್ತು ಬ್ಯಾಂಕುಗಳ ಮೇಲಿನ ನಿರ್ಬಂಧವೂ ಆಗಿದೆ. ಇದನ್ನು 'ಅಗತ್ಯ ಮೀಸಲು ಅನುಪಾತ' ಅಥವಾ 'ಮೀಸಲು ಅನುಪಾತ' ಅಥವಾ 'ನಗದು ಮೀಸಲು ಅನುಪಾತ' (CRR) ಎಂದು ಕರೆಯಲಾಗುತ್ತದೆ.

**ನಗದು ಮೀಸಲು ಅನುಪಾತ (CRR) = ಒಂದು ಬ್ಯಾಂಕು ತನ್ನ ಬಳಿಯೇ ಇಟ್ಟುಕೊಳ್ಳಬೇಕಾದ ಶೇಕಡವಾರು ಠೇವಣಿಗಳು, ಕೇಂದ್ರ ಬ್ಯಾಂಕಿನಲ್ಲಿ ನಗದು ಮೀಸಲಾಗಿ ಇಡಲೇಬೇಕಾದ ಶೇಕಡಾ ಮೊತ್ತ.**

ಅಲ್ಪಾವಧಿಯಲ್ಲಿ ಅಖಖ ಹೊರತಾಗಿ ಕೆಲವು ಮೀಸಲನ್ನು ದ್ರವ್ಯತಾ ರೂಪದಲ್ಲಿ ಇಟ್ಟು ಕೊಳ್ಳುವುದು ಬ್ಯಾಂಕುಗಳಿಗೆ ಅವಶ್ಯಕವಾಗಿದೆ. ಈ ಅನುಪಾತವನ್ನು ಶಾಸನಬದ್ಧ ದ್ರವ್ಯತಾ ಅನುಪಾತ ಅಥವಾ SLR ಎಂದು ಕರೆಯಲಾಗುತ್ತದೆ.

ನಮ್ಮ ಕಾಲ್ಪನಿಕ ಉದಾಹರಣೆಯಲ್ಲಿ CRR=ಶೇ.20 ಎಂದು ಕೊಂಡರೆ ರೂ.100 ಠೇವಣಿಗಳಲ್ಲಿ ನಮ್ಮ ಬ್ಯಾಂಕ್ ರೂ.20 (100 ರ ಶೇ.20) ನ್ನು ನಗದು ಮೀಸಲಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಠೇವಣಿಯಲ್ಲಿ ಉಳಿದ ಮೊತ್ತ ಅಂದರೆ ರೂ.80 (100–20=80) ನ್ನು ಮಾತ್ರ ಸಾಲ ನೀಡಲು ಬಳಸಿಕೊಳ್ಳಬಹುದು. ಮೀಸಲು ಅನುಪಾತದ ಶಾಸನ ಬದ್ಧ ಅಗತ್ಯತೆಯು ಬ್ಯಾಂಕುಗಳು ಸೃಷ್ಟಿಸಬಹುದಾದ ಸಾಲದ ಮೊತ್ತಕ್ಕೆ ಇರುವ ಪರಿಮಿತಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಒಂದು ಆರ್ಥಿಕತೆಯಲ್ಲಿನ ಒಂದೇ ಬ್ಯಾಂಕು ಇರುವಂತಹ ನಮ್ಮ ಕಾಲ್ಪನಿಕ ಉದಾಹರಣೆಗೆ ಹಿಂದಿರುಗುವ ಮೂಲಕ ನಾವು ಇದನ್ನು ಅರ್ಥ ಮಾಡಿಕೊಳ್ಳಬಹುದು. ಲೀಲಾ ಎಂಬುವರು ಮಾಡಿರುವ ರೂ.100 ಠೇವಣಿಯೊಂದಿಗೆ ನಮ್ಮ ಬ್ಯಾಂಕ್ ಆರಂಭಗೊಳ್ಳುತ್ತದೆ ಎಂದು ನಾವು ಭಾವಿಸೋಣ. ಮೀಸಲು ಅನುಪಾತ ಶೇ.20 ಆಗಿದೆ. ಈ ರೀತಿಯಲ್ಲಿ ನಮ್ಮ ಬ್ಯಾಂಕು ರೂ.80 (100–20)ನ್ನು ಸಾಲವಾಗಿ ನೀಡಲು ಹೊಂದಿದೆ ಮತ್ತು ಜಸ್ಪಾಲ್ ಕೌರ್ ಎಂಬುವರಿಗೆ ರೂ.80ನ್ನು ಬ್ಯಾಂಕು ಸಾಲವಾಗಿ ನೀಡುತ್ತದೆ. ಈ ಬ್ಯಾಂಕ್ ಠೇವಣಿಯು ಮುಂದಿನ ಸುತ್ತಿನಲ್ಲಿ ಹೊಣೆಗಾರಿಕೆಯಾಗಿ ಒಟ್ಟು ಠೇವಣಿಯು ರೂ.180 ಆಗುವುದನ್ನು ಇದು ತೋರಿಸುತ್ತದೆ. ಈಗ ನಮ್ಮ ಬ್ಯಾಂಕು ರೂ. 180 ರಲ್ಲಿ ಶೇ.20 ರಷ್ಟನ್ನು ಅಂದರೆ ರೂ.36 ನ್ನು ಮೀಸಲಾಗಿ ಇಟ್ಟುಕೊಳ್ಳಬೇಕು. ನಮ್ಮ ಬ್ಯಾಂಕು ರೂ.100 ನಗದಿನೊಂದಿಗೆ ಆರಂಭವಾಗಿದೆ ಎಂಬುದನ್ನು ನೆನಪಿಸಿಕೊಳ್ಳೋಣ. ಇದು ರೂ.36 ನ್ನು ಮಾತ್ರ ಮೀಸಲಾಗಿ ಇಟ್ಟುಕೊಳ್ಳಬೇಕಾಗಿರುವುದರಿಂದ ಇದು ರೂ.64 (100–36=64) ನ್ನು ಪುನಃ ಸಾಲವಾಗಿ ನೀಡಬಹುದು. ಜುನೈದ್ ರವರಿಗೆ ರೂ.64 ನ್ನು ಸಾಲವಾಗಿ ನೀಡುತ್ತದೆ. ಪ್ರತಿಯಾಗಿ ಇದು ಬ್ಯಾಂಕಿನಲ್ಲಿ ಠೇವಣಿಯಾಗಿ ಕಾಣಿಸಿಕೊಳ್ಳುತ್ತದೆ. ಈ ಪ್ರಕ್ರಿಯೆಯು ಅಗತ್ಯವಿರುವ ಮೀಸಲಿನ ಮೊತ್ತವು ರೂ.100 ಆಗುವವರೆಗೆ ಪುನರಾವರ್ತನೆಗೊಳ್ಳುತ್ತಿರುತ್ತದೆ. ಒಟ್ಟು ಠೇವಣಿಯು ರೂ.500 ಆದಾಗ ಮಾತ್ರ ಅಗತ್ಯವಿರುವ ಮೀಸಲಿನ ಮೊತ್ತವು ರೂ.100 ಆಗುತ್ತದೆ. ಇದು ಏಕೆಂದರೆ ರೂ.500 ಠೇವಣಿಗೆ ನಗದು ಮೀಸಲು ರೂ.100 ಆಗುತ್ತದೆ (500 ರ ಶೇ.20=100). ಈ ಪ್ರಕ್ರಿಯೆಯನ್ನು ಕೋಷ್ಟಕ 3.2 ರಲ್ಲಿ ನಿರೂಪಿಸಲಾಗಿದೆ.

**3.2 ಹಣದ ಗುಣಕದ ಪ್ರಕ್ರಿಯೆ**

| ಕಾಲಂ 1 | ಕಾಲಂ 2 | ಕಾಲಂ 3 | ಕಾಲಂ 4 |
|---|---|---|---|
| ಸುತ್ತು | ಬ್ಯಾಂಕಿನಲ್ಲಿನ ಠೇವಣಿ | ಅಗತ್ಯವಿರುವ ಮೀಸಲು | ಬ್ಯಾಂಕ್ ನೀಡಿರುವ ಸಾಲ |
| 1 | 100.00 | 20.00 | 80.00 |
| 2 | 180.00 | 36.00 | 64.00 |
| . | . | . | . |
| . | . | . | . |
| . | . | . | . |
| . | . | . | . |
| . | . | . | . |
| ಅಂತಿಮ | 500.00 | 100.00 | 400.00 |

ಮೊದಲನೇ ಕಾಲಂನಲ್ಲಿ ಪ್ರತಿ ಸುತ್ತಿನ ಪಟ್ಟಿಯಿದೆ. ಪ್ರತೀ ಸುತ್ತಿನ ಆರಂಭದಲ್ಲಿ ಬ್ಯಾಂಕಿನಲ್ಲಿರುವ ಒಟ್ಟು ಠೇವಣಿಯನ್ನು ಎರಡನೇ ಕಾಲಂ ಚಿತ್ರಿಸುತ್ತದೆ. ಈ ಠೇವಣಿಗಳಲ್ಲಿ ಶೇ.20 ರಷ್ಟನ್ನು ಖಃಖ ನಲ್ಲಿ ಅಗತ್ಯ

ಮೀಸಲಾಗಿ ಠೇವಣಿಯಾಗಿ ಇಡಬೇಕಾದುದು ಕಾಲಂ 3 ರಲ್ಲಿದೆ. ಪ್ರತೀ ಸುತ್ತಿನಲ್ಲಿ ಬ್ಯಾಂಕ್ ನೀಡಬಹುದಾದ ಸಾಲವು ಮುಂದಿನ ಸುತ್ತಿನಲ್ಲಿ ಬ್ಯಾಂಕಿನ ಠೇವಣಿಗೆ ಸೇರಿಕೊಳ್ಳುತ್ತದೆ. ಬ್ಯಾಂಕುಗಳು ನೀಡುವ ಸಾಲವನ್ನು ನಾಲ್ಕನೇ ಕಾಲಂ ಸೂಚಿಸುತ್ತದೆ.

**3.3 ಬ್ಯಾಂಕಿನ ಅಥಾವೆ ಪತ್ರಿಕೆ**

| ಆಸ್ತಿಗಳು(ಮೂಲಗಳು) | ರೂ (₹) | ಹೊಣೆಗಾರಿಕೆ | ರೂ (₹) |
|---|---|---|---|
| ಮೀಸಲುಗಳು | 100 | ಠೇವಣಿಗಳು (100+400) | 500 |
| ಸಾಲಗಳು | 400 | | |
| **ಒಟ್ಟು** | **500** | **ಒಟ್ಟು** | **500** |

ಬ್ಯಾಂಕು ತನ್ನ ಠೇವಣಿಗಳಲ್ಲಿ ಶೇ.20 ರಷ್ಟನ್ನು ಮೀಸಲಾಗಿ ಇಡುವುದು ಮಾತ್ರ ನಿರೀಕ್ಷಿತವಾಗಿರುವುದರಿಂದ ರೂ.100 (500 ರ ಶೇ.20) ರ ಮೀಸಲು ರೂ.500 ರ ಠೇವಣಿಗೆ ಬೆಂಬಲವಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮ ಬ್ಯಾಂಕ್ ರೂ.400 ನ್ನು ಸಾಲವನ್ನು ನೀಡಬಹುದು. ಕೋಷ್ಟಕ 3.3 ಅದರ ಅಥಾವೆ ಪತ್ರಿಕೆಯನ್ನು ಪ್ರದರ್ಶಿಸುತ್ತದೆ.

$$M_1 = \text{ಕರೆನ್ಸಿ} + \text{ಠೇವಣಿಗಳು} = 0 + 500 = 500$$

ಹೀಗೆ ಹಣದ ಪೂರೈಕೆಯು ರೂ.100 ರಿಂದ ರೂ.500 ಕ್ಕೆ ಹೆಚ್ಚಾಗುತ್ತದೆ.

CRR ಶೇ.20 ರಷ್ಟು ಎಂದು ನೀಡಿರುವುದರಿಂದ ಬ್ಯಾಂಕು ರೂ.400 ನ್ನು ಮೀರಿ ಸಾಲವನ್ನು ನೀಡುವಂತಿಲ್ಲ. ಆದ್ದರಿಂದ ಮೀಸಲಿನ ಅಗತ್ಯತೆಯು ಹಣದ ಸೃಷ್ಟಿಯ ಪರಿಮಿತಿಯಾಗಿ ಕಾರ್ಯ ನಿರ್ವಹಿಸುತ್ತದೆ.

$$\text{ಹಣದ ಗುಣಕ} = \frac{1}{\text{ನಗದು ಮೀಸಲು ಅನುಪಾತ}}$$

ನಮ್ಮ ಉದಾಹರಣೆಯಲ್ಲಿ, ಹಣದ ಗುಣಕವು $= \frac{1}{20\%} = \frac{1}{0.2} = 5$. ಹೀಗೆ ರೂ.100 ರ ಮೀಸಲು ಸೃಷ್ಟಿಸಬಹುದಾದ ಠೇವಣಿ $(5 \times 100)$ = ರೂ.500 ಆಗಿದೆ.

## 3.4 ಹಣದ ಪೂರೈಕೆಯನ್ನು ನಿಯಂತ್ರಿಸುವ ನೀತಿ ಸಾಧನಗಳು
### *Policy Tools To Control Money Supply*

ಭಾರತೀಯ ರಿಸರ್ವ್ ಬ್ಯಾಂಕ್ ಕರೆನ್ಸಿಯನ್ನು ಚಲಾವಣೆಗೆ ತರುವ ಏಕ ಮಾತ್ರ ಸಂಸ್ಥೆಯಾಗಿದೆ. ಹೆಚ್ಚು ಸಾಲವನ್ನು ಸೃಷ್ಟಿಸುವ ಸಲುವಾಗಿ ವಾಣಿಜ್ಯ ಬ್ಯಾಂಕುಗಳಿಗೆ ಹಣದ ಅವಶ್ಯಕತೆಯುಂಟಾದಾಗ ಅವು ಅಂತಹ ಹಣಕ್ಕಾಗಿ ಮಾರುಕಟ್ಟೆಗೆ ಅಥವಾ ಕೇಂದ್ರ ಬ್ಯಾಂಕಿಗೆ ಹೋಗಬಹುದು. ಕೇಂದ್ರ ಬ್ಯಾಂಕ್ ವಿವಿಧ ಸಾಧನಗಳ ಮೂಲಕ ಅವುಗಳಿಗೆ ಹಣವನ್ನು ಒದಗಿಸುತ್ತದೆ. ಎಲ್ಲಾ ಸಮಯದಲ್ಲೂ ಬ್ಯಾಂಕುಗಳಿಗೆ ಸಾಲ ನೀಡಲು ಸನ್ನದ್ಧವಾಗಿರುವ RBI ನ ಪಾತ್ರವೂ ಕೂಡಾ ಕೇಂದ್ರ ಬ್ಯಾಂಕಿನ ಇನ್ನೊಂದು ಪ್ರಮುಖ ಕಾರ್ಯವಾಗಿದೆ ಮತ್ತು ಇದರಿಂದಾಗಿ ಕೇಂದ್ರ ಬ್ಯಾಂಕನ್ನು **ಅಂತಿಮ ಋಣದಾತ** ಎಂದು ಕರೆಯುತ್ತಾರೆ.

ಆರ್ಥಿಕತೆಯಲ್ಲಿನ ಹಣದ ಪೂರೈಕೆಯನ್ನು RBI ವಿವಿಧ ಮಾರ್ಗದಲ್ಲಿ ನಿಯಂತ್ರಿಸುತ್ತದೆ. ಹಣದ ಪೂರೈಕೆಯನ್ನು ನಿಯಂತ್ರಿಸಲು ಕೇಂದ್ರ ಬ್ಯಾಂಕ್ ಬಳಸುವ ಸಾಧನಗಳು ಪರಿಮಾಣಾತ್ಮಕವಾಗಿ ಅಥವಾ ಗುಣಾತ್ಮಕವಾಗಿ ಇರಬಹುದು. ನಗದು ಮೀಸಲು ಅನುಪಾತ ಅಥವಾ ಬ್ಯಾಂಕ್ ದರಗಳಲ್ಲಿನ ಬದಲಾವಣೆ ಅಥವಾ ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆಗಳಿಂದ ಪರಿಮಾಣಾತ್ಮಕ ಸಾಧನಗಳು ಹಣದ ಪೂರೈಕೆಯ ವ್ಯಾಪ್ತಿಯನ್ನು ನಿಯಂತ್ರಿಸುತ್ತದೆ. ಕೇಂದ್ರ ಬ್ಯಾಂಕು, ವಾಣಿಜ್ಯ ಬ್ಯಾಂಕುಗಳು ಸಾಲ ನೀಡುವಂತೆ ಉತ್ತೇಜನ ಅಥವಾ ನಿರುತ್ತೇಜನ ನೀಡಲು ನೈತಿಕ ಪ್ರೇರಣೆ, ಸೀಮಾಂತ ಅಗತ್ಯತೆ ಇತ್ಯಾದಿ ಕ್ರಮಗಳು (ಉಪಕರಣಗಳನ್ನು) ಗುಣಾತ್ಮಕ ಕ್ರಮಗಳಲ್ಲಿ ಸೇರಿವೆ.

ಕೇಂದ್ರ ಬ್ಯಾಂಕ್ ಮೀಸಲು ಅನುಪಾತವನ್ನು ಬದಲಾಯಿಸಿದರೆ ಬ್ಯಾಂಕುಗಳು ನೀಡುವ ಸಾಲದಲ್ಲಿ ಬದಲಾವಣೆಗಳಾಗುತ್ತವೆ, ಪ್ರತಿಯಾಗಿ ಇದು ಠೇವಣಿಗಳ ಮೇಲೆ ಮತ್ತು ಹಣದ ಪೂರೈಕೆಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದು ಈಗ ಇದರಿಂದ ಸ್ಪಷ್ಟವಾಗುತ್ತದೆ. ಹಿಂದಿನ ಉದಾಹರಣೆಯಲ್ಲಿ ಚರ್ಚಿಸಿದಂತೆ RBI ಮೀಸಲು ಅನುಪಾತವನ್ನು ಶೇ.25 ಕ್ಕೆ ಹೆಚ್ಚಿಸಿದರೆ ಹಣದ ಗುಣಕ ಏನಾಗುತ್ತದೆ? ಹಿಂದಿನ ಪ್ರಕರಣದಲ್ಲಿ ಗಮನಿಸಿದಂತೆ ಮೀಸಲಿನಲ್ಲಿದ್ದ ರೂ.100, ರೂ.400 ರಷ್ಟು ಠೇವಣಿಗೆ ಬೆಂಬಲವಾಗಿತ್ತು. ಆದರೆ ಈಗ ಬ್ಯಾಂಕಿಂಗ್ ವ್ಯವಸ್ಥೆಯು ರೂ.300 ರಷ್ಟು ಮಾತ್ರ ಸಾಲವನ್ನು ನೀಡಲು ಶಕ್ತವಾಗಿದೆ. ಹೆಚ್ಚಿಸಲಾದ ಮೀಸಲಿನ ಅಗತ್ಯವನ್ನು ಪೂರೈಸಲು ಅದು ಕೆಲವು ಸಾಲಗಳನ್ನು ಮರಳಿ ಪಡೆಯಬೇಕಾಗುತ್ತದೆ. ಇದರಿಂದಾಗಿ ಹಣದ ಪೂರೈಕೆಯು ಕಡಿಮೆಯಾಗುತ್ತದೆ.

ಹಣದ ಪೂರೈಕೆಯ ಮೇಲೆ ಖಃಖ ಪ್ರಭಾವ ಬೀರುವ ಇನ್ನೊಂದು ಪ್ರಮುಖ ಸಾಧನವೆಂದರೆ ಮುಕ್ತ **ಮಾರುಕಟ್ಟೆಯ ಕಾರ್ಯಾಚರಣೆಗಳು.** ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆ ಎಂದರೆ ಸರಕಾರ ಬಿಡುಗಡೆ ಮಾಡಿದ ಬಾಂಡುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವುದು ಮತ್ತು ಮಾರಾಟ ಮಾಡುವುದು. ಈ ಖರೀದಿ ಮತ್ತು ಮಾರಾಟವನ್ನು ಸರಕಾರದ ಪರವಾಗಿ ಕೇಂದ್ರ ಬ್ಯಾಂಕಿಗೆ ವಹಿಸಲಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ RBI ಸರಕಾರಿ ಬಾಂಡನ್ನು ಖರೀದಿಸಿದಾಗ ಅದು ಒಂದು ಚೆಕ್ಕನ್ನು ನೀಡುವುದರ ಮೂಲಕ ಪಾವತಿಸುತ್ತದೆ. ಈ ಚೆಕ್ಕು ಆರ್ಥಿಕತೆಯ ಒಟ್ಟು ಮೀಸಲಿನ ಮೊತ್ತವನ್ನು ಹೆಚ್ಚಿಸುತ್ತದೆ ಮತ್ತು ಈ ರೀತಿಯಲ್ಲಿ ಹಣದ ಪೂರೈಕೆಯನ್ನು ಹೆಚ್ಚಿಸುತ್ತದೆ. ಒಂದು ಬಾಂಡನ್ನು RBI ಮಾರಾಟ (ಖಾಸಗಿ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ) ಮಾಡಿದಾಗ ಮೀಸಲಿನ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ ಮತ್ತು ಅದರಿಂದ ಹಣದ ಪೂರೈಕೆ ಕಡಿಮೆಯಾಗುತ್ತದೆ.

ಎರಡು ಪ್ರಕಾರದ ಮುಕ್ತ ಮಾರುಕಟ್ಟೆ ಕಾರ್ಯಾಚರಣೆಗಳಿವೆ: ಔಟ್ ರೈಟ್ ಮತ್ತು ರೆಪೋ. ಔಟ್ ರೈಟ್ ಮುಕ್ತ ಮಾರುಕಟ್ಟೆ ಕಾರ್ಯಾಚರಣೆಗಳು ಶಾಶ್ವತ ಸ್ವರೂಪದ್ದಾಗಿದೆ. ಕೇಂದ್ರ ಬ್ಯಾಂಕ್ ಈ ಭದ್ರತೆಗಳನ್ನು ಖರೀದಿಸಿದಾಗ (ಆ ರೀತಿಯಲ್ಲಿ ವ್ಯವಸ್ಥೆಗೆ ಹಣವನ್ನು ಒಳ ಸೇರಿಸುತ್ತದೆ) ನಂತರ ಅವುಗಳನ್ನು ಮಾರಾಟ ಮಾಡುವ ಯಾವುದೇ ಭರವಸೆ ಇರುವುದಿಲ್ಲ. ಅದೇ ರೀತಿ ಕೇಂದ್ರ ಬ್ಯಾಂಕು ಈ ಭದ್ರತೆಗಳನ್ನು ಮಾರಾಟ ಮಾಡಿದಾಗ (ಆ ರೀತಿಯಲ್ಲಿ ವ್ಯವಸ್ಥೆಯಿಂದ ಹಣವನ್ನು ಹಿಂದಕ್ಕೆ ಪಡೆಯುವುದು) ನಂತರ ಅವುಗಳನ್ನು ಖರೀದಿ ಮಾಡುವ ಯಾವುದೇ ಭರವಸೆ ಇರುವುದಿಲ್ಲ. ಇದರ ಫಲವಾಗಿ ಹಣವನ್ನು ಒಳ ಸೇರಿಸುವ/ಹೀರುವಿಕೆಯು ಶಾಶ್ವತ ಸ್ವರೂಪದ್ದಾಗಿರುತ್ತದೆ. ಆದಾಗ್ಯೂ ಇನ್ನೊಂದು ರೀತಿಯ ಕಾರ್ಯಾಚರಣೆಯಲ್ಲಿ ಕೇಂದ್ರ ಬ್ಯಾಂಕು ಭದ್ರತೆಗಳನ್ನು ಖರೀದಿಸುತ್ತದೆ, ಈ ಖರೀದಿ ಒಪ್ಪಂದವು ಈ ಭದ್ರತೆಯ ಮರು ಮಾರಾಟದ ದಿನಾಂಕ ಮತ್ತು ಬೆಲೆಯ ವಿಶೇಷತೆಯನ್ನು ಹೊಂದಿರುತ್ತದೆ. ಈ ಬಗೆಯ ಒಪ್ಪಂದವನ್ನು **ಮರು ಖರೀದಿ ಒಪ್ಪಂದ** ಅಥವಾ **ರೆಪೋ** ಎಂದು ಕರೆಯಲಾಗುತ್ತದೆ. ಈ ರೀತಿಯಲ್ಲಿ ಯಾವ ಬಡ್ಡಿಯ ದರದಲ್ಲಿ ಸಾಲವನ್ನು ನೀಡಲಾಗುತ್ತದೆಯೋ ಅದನ್ನು ರೆಪೋ ದರ ಎಂದು ಕರೆಯಲಾಗುತ್ತದೆ. ಅದೇ ರೀತಿ ಭದ್ರತೆಗಳನ್ನು ಔಟ್ ರೈಟ್ ಆಗಿ ಮಾರಾಟ ಮಾಡುವುದರ ಬದಲು ಕೇಂದ್ರ ಬ್ಯಾಂಕು ಭದ್ರತೆಗಳನ್ನು ಮರು ಖರೀದಿಸಲಾಗುವ ಬೆಲೆ ಮತ್ತು ದಿನಾಂಕದ ವಿಶೇಷತೆಯನ್ನು ಹೊಂದಿರುವ ಒಂದು ಒಪ್ಪಂದದ ಮೂಲಕ ಮಾರಾಟ ಮಾಡಬಹುದು. ಈ ಬಗೆಯ ಒಪ್ಪಂದವನ್ನು **ಪ್ರತಿಲೋಮ ಮರು ಖರೀದಿ** ಒಪ್ಪಂದ ಅಥವಾ **ರಿವರ್ಸ್ ರೆಪೋ** ಎಂದು ಕರೆಯಲಾಗುತ್ತದೆ. ಈ ರೀತಿಯಲ್ಲಿ ಹಣವನ್ನು ಯಾವ ದರದಲ್ಲಿ ಹಿಂದಕ್ಕೆ ಪಡೆಯಲಾಗುತ್ತದೆಯೋ ಅದನ್ನು ರಿವರ್ಸ್ ರೆಪೋ ದರ ಎಂದು ಕರೆಯಲಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ರೆಪೋ ಮತ್ತು ರಿವರ್ಸ್ ರೆಪೋ ಕಾರ್ಯಾಚರಣೆಗಳನ್ನು ವಿವಿಧ ವಾಯಿದೆಗಳಲ್ಲಿ ನಿರ್ವಹಿಸುತ್ತದೆ: ಒಂದು ರಾತ್ರಿಯ ಅವಧಿಗೆ, 7–ದಿನ, 14–ದಿನ, ಇತ್ಯಾದಿ. ಈಗ ಈ ಬಗೆಯ ಕಾರ್ಯಾಚರಣೆಗಳು ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿಯ ಪ್ರಮುಖ ಸಾಧನಗಳಾಗಿವೆ.

ವಾಣಿಜ್ಯ ಬ್ಯಾಂಕುಗಳಿಗೆ ಸಾಲ ನೀಡುವ ದರವನ್ನು ಬದಲಾಯಿಸುವುದರ ಮೂಲಕ RBI ಹಣದ ಪೂರೈಕೆಯ ಮೇಲೆ ಪ್ರಭಾವ ಬೀರುತ್ತದೆ. ಭಾರತದಲ್ಲಿ ಇದನ್ನು ಬ್ಯಾಂಕ್ ದರ ಎಂದು ಕರೆಯಲಾಗುತ್ತದೆ. ಬ್ಯಾಂಕ್ ದರವನ್ನು ಏರಿಸುವುದರಿಂದ, ವಾಣಿಜ್ಯ ಬ್ಯಾಂಕುಗಳು ಪಡೆದಿರುವ ಸಾಲವು ಹೆಚ್ಚು ದುಬಾರಿಯಾಗುತ್ತದೆ; ಇದು ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಮೀಸಲು ಪ್ರಮಾಣವನ್ನು ಕಡಿಮೆ ಮಾಡುತ್ತದೆ ಮತ್ತು ಇದರಿಂದ ಹಣದ ಪೂರೈಕೆ ಕಡಿಮೆಯಾಗುತ್ತದೆ. ಬ್ಯಾಂಕ್ ದರದಲ್ಲಿನ ಇಳಿಕೆಯು ಹಣದ ಪೂರೈಕೆಯನ್ನು ಹೆಚ್ಚಿಸುತ್ತದೆ.

### ಪೆಟ್ಟಿಗೆ 3.1 ಹಣದ ಬೇಡಿಕೆ ಮತ್ತು ಪೂರೈಕೆ: ಒಂದು ವಿವರಣಾತ್ಮಕ ಚರ್ಚೆ
### *Demand and Supply for Money: A Detailed Discussion*

ಎಲ್ಲಾ ಆಸ್ತಿಗಳಲ್ಲಿ ಹಣ ಅತ್ಯಂತ ಹೆಚ್ಚು ದ್ರವ್ಯತೆಯುಳ್ಳದ್ದಾಗಿದೆ. ಇದರರ್ಥವೇನೆಂದರೆ ಇದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಬಹುದಾಗಿದೆ ಮತ್ತು ಸುಲಭವಾಗಿ ಇತರೆ ಸರಕುಗಳಿಗೆ ವಿನಿಮಯ ಮಾಡಬಹುದಾಗಿದೆ. ಇನ್ನೊಂದು ಕಡೆ ಇದು ಸದಾವಕಾಶ ವೆಚ್ಚವನ್ನು ಹೊಂದಿದೆ. ನಿರ್ಧಿಷ್ಟ ನಗದು ಶಿಲ್ಕನ್ನು ಇಟ್ಟುಕೊಳ್ಳುವ ಬದಲು ಹಣವನ್ನು ನೀವು ಯಾವುದೇ ಬ್ಯಾಂಕಿನಲ್ಲಿ ಸ್ಥಿರ ಠೇವಣಿಯಾಗಿ ಇಟ್ಟರೆ ಆ ಹಣದ ಮೇಲೆ ನೀವು ಬಡ್ಡಿಯನ್ನು ಗಳಿಸಬಹುದು. ಒಂದು ನಿರ್ಧಿಷ್ಟ ಸಮಯದಲ್ಲಿ ಎಷ್ಟು ಹಣವನ್ನು ಇಟ್ಟುಕೊಳ್ಳಬೇಕು ಎಂದು ನಿರ್ಧರಿಸುವಾಗ, ದ್ರವ್ಯತೆಯ ಅನುಕೂಲ ಮತ್ತು ತ್ಯಾಗ ಮಾಡಬೇಕಾದ ಬಡ್ಡಿಯ ಅನಾನುಕೂಲತೆಯ ನಡುವಿನ ತುಲನೆಯನ್ನು (ರಾಜಿ ವಿನಿಮಯ) ಪರಿಗಣಿಸಬೇಕು. ಈ ರೀತಿಯಲ್ಲಿ ಹಣದ ಶಿಲ್ಕಿನ ಬೇಡಿಕೆಯನ್ನು ದ್ರವ್ಯತೆಯ ಆದ್ಯತೆ ಎಂದು ಆಗಾಗ ಉಲ್ಲೇಖಿಸಲಾಗುತ್ತದೆ. ವಿಶಾಲಾರ್ಥದಲ್ಲಿ ಎರಡು ಉದ್ದೇಶಗಳಿಗಾಗಿ ಜನರು ಹಣವನ್ನು ನಗದು ಶಿಲ್ಕಾಗಿ ಇಟ್ಟುಕೊಳ್ಳಲು ಬಯಸುತ್ತಾರೆ.

#### ವ್ಯವಹಾರದ ಉದ್ದೇಶ *The Transaction Motive*

ಹಣವನ್ನು ಇಟ್ಟು ಕೊಳ್ಳುವುದರ ಪ್ರಧಾನ ಉದ್ದೇಶವೇ ವ್ಯವಹಾರಗಳನ್ನು ಕೈಗೊಳ್ಳುವುದು. ನೀವು ನಿಮ್ಮ ವೇತನವನ್ನು ವಾರಕೊಮ್ಮೆ ಪಡೆದು ನಿಮ್ಮ ಬಿಲ್ಲುಗಳನ್ನು ಪ್ರತಿ ವಾರದ ಮೊದಲ ದಿನವೇ ಪಾವತಿಸುತ್ತಿದ್ದರೆ ವಾರದ ಉಳಿದ ದಿನಗಳಿಗಾಗಿ ನೀವು ಯಾವುದೇ ನಗದು ಶಿಲ್ಕನ್ನು ಇಟ್ಟು ಕೊಳ್ಳುವ ಅವಶ್ಯಕತೆಯಿರುವುದಿಲ್ಲ; ನಿಮ್ಮ ವಾರದ ಸಂಬಳದಿಂದ ನೇರವಾಗಿ ಖರ್ಚುಗಳನ್ನು ಕಳೆದು ಉಳಿದ ಶಿಲ್ಕನ್ನು ನಿಮ್ಮ ಬ್ಯಾಂಕಿನ ಖಾತೆಗೆ ಜಮಾ ಮಾಡುವಂತೆ ನಿಮ್ಮ ಉದ್ಯೋಗದಾತನನ್ನು ಕೇಳಬಹುದು. ಆದರೆ ನಮ್ಮ ವೆಚ್ಚದ ನಮೂನೆಗಳು ಸಾಮಾನ್ಯವಾಗಿ ನಮ್ಮ ಆದಾಯದೊಂದಿಗೆ ಹೊಂದಿಕೆಯಾಗುವುದಿಲ್ಲ. ಜನರು ತಮ್ಮ ಆದಾಯವನ್ನು ಬೇರೆ ಬೇರೆ ಸಮಯದಲ್ಲಿ ಗಳಿಸುತ್ತಾರೆ ಮತ್ತು ನಡುವಿನ ಅವಧಿಯ ಉದ್ದಕ್ಕೂ ನಿರಂತರವಾಗಿ ಖರ್ಚು ಮಾಡುತ್ತಾರೆ. ನೀವು ಪ್ರತಿ ತಿಂಗಳ ಮೊದಲನೇ ದಿನ 100 ರೂಪಾಯಿಗಳನ್ನು ಸಂಪಾದಿಸುತ್ತೀರಿ ಮತ್ತು ಈ ಶಿಲ್ಕನ್ನು ತಿಂಗಳ ಉಳಿದ ದಿನಗಳಲ್ಲಿ ಸಮಾನವಾಗಿ ಖರ್ಚು ಮಾಡುತ್ತೀರಿ ಎಂದುಕೊಳ್ಳೋಣ. ಹೀಗಾಗಿ ನಿಮ್ಮ ನಗದು ಶಿಲ್ಕು ತಿಂಗಳ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಅನುಕ್ರಮವಾಗಿ ₹100 ಮತ್ತು 0 ಆಗಿರುತ್ತದೆ. ನಿಮ್ಮ ಸರಾಸರಿ ನಗದು ಹೊಂದಿರುವಿಕೆಯನ್ನು (₹100+₹0)÷2=₹50, ಎಂದು ಲೆಕ್ಕಾಚಾರ ಮಾಡಬಹುದು ಮತ್ತು ಅದರಿಂದ ನೀವು ಪ್ರತಿ ತಿಂಗಳು 100 ರೂಪಾಯಿ ಮೌಲ್ಯದ ವ್ಯವಹಾರಗಳನ್ನು ಮಾಡಿರುವಿರಿ. ಆದ್ದರಿಂದ ಹಣಕ್ಕಾಗಿ ಇರುವ ನಿಮ್ಮ ಸರಾಸರಿ ವ್ಯವಹಾರದ ಬೇಡಿಕೆಯು ನಿಮ್ಮ ಅರ್ಧ ತಿಂಗಳ ಆದಾಯಕ್ಕೆ ಸಮವಾಗಿರುತ್ತದೆ ಅಥವಾ ಇನ್ನೊಂದು ಅರ್ಥದಲ್ಲಿ ನಿಮ್ಮ ತಿಂಗಳ ವಹಿವಾಟಿನ ಮೌಲ್ಯದ ಅರ್ಧದಷ್ಟಾಗಿರುತ್ತದೆ.

ಈಗ ಎರಡು ಘಟಕಗಳು ಮಾತ್ರ ಇರುವ ಎರಡೇ ವ್ಯಕ್ತಿಗಳ ಒಂದು ಅರ್ಥವ್ಯವಸ್ಥೆಯನ್ನು ಪರಿಗಣಿಸೋಣ. – ಒಂದು ಉದ್ಯಮ ಘಟಕ (ಒಬ್ಬ ವ್ಯಕ್ತಿಯ ಮಾಲಿಕತ್ವದಲ್ಲಿರುವುದು) ಮತ್ತು ಒಬ್ಬ ಕಾರ್ಮಿಕ. ಉದ್ಯಮ ಘಟಕವು ಪ್ರತಿ ತಿಂಗಳ ಆರಂಭದಲ್ಲಿ ₹100 ವೇತನವನ್ನು ಕಾರ್ಮಿಕನಿಗೆ ಪಾವತಿಸುತ್ತದೆ. ಇದಕ್ಕೆ ಪ್ರತಿಯಾಗಿ ಕಾರ್ಮಿಕನು ತನ್ನ ತಿಂಗಳ ಆದಾಯವನ್ನು ಉದ್ಯಮವು ಉತ್ಪಾದಿಸಿದ ಉತ್ಪನ್ನದ ಮೇಲೆ ಖರ್ಚು ಮಾಡುತ್ತಾನೆ–ಈ ಆರ್ಥಿಕತೆಯಲ್ಲಿ ಒಂದೇ ಸರಕು ದೊರೆಯುತ್ತದೆ! ಆ ರೀತಿಯಲ್ಲಿ ಪ್ರತಿ ತಿಂಗಳ ಆರಂಭದಲ್ಲಿ ಕಾರ್ಮಿಕ ₹100 ರ ಶಿಲ್ಕು ಮತ್ತು ಉದ್ಯಮ ಘಟಕವು ₹0 ಶಿಲ್ಕನ್ನು ಹೊಂದಿರುತ್ತದೆ. ತಿಂಗಳ ಕೊನೆಯ ದಿನ ಚಿತ್ರಣವು ವಿರುದ್ಧವಾಗಿರುತ್ತದೆ. ಉದ್ಯಮ ಘಟಕವು ಕಾರ್ಮಿಕನಿಗೆ ಸರಕುಗಳನ್ನು ಮಾರುವುದರ ಮೂಲಕ ₹100 ಶಿಲ್ಕನ್ನು ಸಂಗ್ರಹಿಸುತ್ತದೆ. ಉದ್ಯಮ ಘಟಕ ಮತ್ತು ಕಾರ್ಮಿಕನ ಸರಾಸರಿ ನಗದು ಹೊಂದಿರುವಿಕೆಯ ಮೊತ್ತ ಇಬ್ಬರಿಗೂ ಸಮಾನವಾಗಿ ₹50 ಆಗಿರುತ್ತದೆ. ಹಾಗಾಗಿ ಈ ಆರ್ಥಿಕತೆಯ ಒಟ್ಟು ಹಣದ ಬೇಡಿಕೆಯು ₹100 ಕ್ಕೆ ಸಮವಿರುತ್ತದೆ. ಈ ಆರ್ಥಿಕತೆಯಲ್ಲಿ ತಿಂಗಳ ವಹಿವಾಟಿನ ಒಟ್ಟು ಮೊತ್ತ ₹200 ಆಗಿರುತ್ತದೆ. ಉದ್ಯಮ ಘಟಕವು ₹100 ಮೊತ್ತದ ತನ್ನ ಉತ್ಪನ್ನವನ್ನು ಕಾರ್ಮಿಕನಿಗೆ ಮತ್ತು ಕಾರ್ಮಿಕ ₹100 ಮೊತ್ತದ ತನ್ನ ಸೇವೆಯನ್ನು ಉದ್ಯಮ ಘಟಕಕ್ಕೆ ಮಾರಾಟ ಮಾಡಿರುತ್ತಾರೆ. ನಿರ್ಧಿಷ್ಟ ಸಮಯದಲ್ಲಿ ಆರ್ಥಿಕತೆಯಲ್ಲಿನ

ನಗದು ವ್ಯವಹಾರದ ಹಣದ ಬೇಡಿಕೆಯು ಪುನಃ ಆರ್ಥಿಕತೆಯ ವಹಿವಾಟಿನ ಒಟ್ಟು ಗಾತ್ರದಲ್ಲಿನ ಒಂದು ಭಾಗವಾಗಿರುತ್ತದೆ.

ಆದ್ದರಿಂದ, ಸಾಮಾನ್ಯವಾಗಿ, ಆರ್ಥಿಕತೆಯಲ್ಲಿ ನಗದು ವ್ಯವಹಾರದ ಬೇಡಿಕೆಯು $M_T^d$, ಇದನ್ನು ಹೀಗೆ ಬರೆಯಬಹುದು.

$$M_T^d = k.T \tag{3.1}$$

ಇಲ್ಲಿ T ನಿರ್ದಿಷ್ಟ ಸಮಯದಲ್ಲಿ ಆರ್ಥಿಕತೆಯ ವಹಿವಾಟಿನ ಒಟ್ಟು ಮೌಲ್ಯ (ನಾಮ ಮಾತ್ರ) ಮತ್ತು $k$ ಧನಾತ್ಮಕ ಭಾಗವಾಗಿರುತ್ತದೆ.

ಮೇಲೆ ವಿವರಿಸಲಾದ ಎರಡು ವ್ಯಕ್ತಿಗಳ ಆರ್ಥಿಕತೆಯನ್ನು ಮತ್ತೊಂದು ದೃಷ್ಟಿ ಕೋನದಿಂದ ನೋಡಬಹುದಾಗಿದೆ. ಆರ್ಥಿಕತೆಯು ₹100 ಮೌಲ್ಯದ ಶಿಲ್ಕನ್ನು ಉಪಯೋಗಿಸಿಕೊಂಡು ತಿಂಗಳಿಗೆ ₹200 ಮೌಲ್ಯದ ವ್ಯವಹಾರ ಮಾಡುತ್ತಿರುವುದನ್ನು ನೋಡಿದಾಗ ಬಹುಷಃ ನಿಮಗೆ ಆಶ್ಚರ್ಯವೆನಿಸಬಹುದು. ಈ ಒಗಟಿಗೆ ಉತ್ತರ ತುಂಬಾ ಸರಳವಾಗಿದೆ–ಪ್ರತಿ ರೂಪಾಯಿಯೂ ತಿಂಗಳಗೆ ಎರಡು ಬಾರಿ ಕೈ ಬದಲಾಯಿಸುತ್ತದೆ. ಮೊದಲ ದಿನ ಅದು ಮಾಲಿಕನ ಕಿಸೆಯಿಂದ ಕಾರ್ಮಿಕನ ಕಿಸೆಗೆ ವರ್ಗಾಯಿಸಲ್ಪಡುತ್ತಿರುತ್ತದೆ ಮತ್ತು ತಿಂಗಳಿನ ಕೆಲ ಸಮಯದಲ್ಲಿ ಅದು ಕಾರ್ಮಿಕನ ಕೈಯಿಂದ ಮಾಲಿಕನ ಕೈಯಿಗೆ ದಾಟುತ್ತದೆ. ನಿರ್ದಿಷ್ಟ ಸಮಯದಲ್ಲಿ ಹಣದ ಒಂದು ಘಟಕವು ಎಷ್ಟು ಬಾರಿ ಕೈಗಳನ್ನು ಬದಲಾಯಿಸುತ್ತದೆ ಎನ್ನುವುದನ್ನು **ಹಣದ ಚಲಾವಣೆಯ ವೇಗ** ಎಂದು ಕರೆಯುತ್ತಾರೆ. ಮೇಲಿನ ಉದಾಹರಣೆಯಲ್ಲಿ ಅದು 2, ಅರ್ಥದ ವಿಲೋಮ– ಹಣದ ಶಿಲ್ಕು ಮತ್ತು ವಹಿವಾಟಿನ ಮೌಲ್ಯದ ಅನುಪಾತವಾಗಿದೆ. ಹೀಗೆ, ಸಾಮಾನ್ಯವಾಗಿ ಸಮೀಕರಣವನ್ನು (3.1) ಈ ಕೆಳಗಿನಂತೆ ನಾವು ಬರೆಯಬಹುದು.

$$\frac{1}{k}.M_T^d = T, \text{ or, } v.M_T^d = T \tag{3.2}$$

ಇಲ್ಲಿ $v = \frac{1}{k}$. ಚಲಾವಣೆಯ ವೇಗವಾಗಿದೆ. ಇಲ್ಲಿ ಗಮನಿಸಬೇಕಾದುದು ಮೇಲಿನ ಸಮೀಕರಣದ ಬಲಗಡೆ ಇರುವ T ಎಂಬುದು ಹರಿವಿನ ಚಲಕವಾಗಿದೆ, ಹಣದ ಬೇಡಿಕೆ $M_T^d$ ದಾಸ್ತಾನು ಪರಿಕಲ್ಪನೆಯಾಗಿದೆ– ಇದು ಒಂದು ನಿರ್ದಿಷ್ಟ ಸಮಯದಲ್ಲಿ ಜನರು ನಗದು ರೂಪದಲ್ಲಿ ಇಟ್ಟುಕೊಳ್ಳಲು ಬಯಸುವ ದಾಸ್ತಾನಾಗಿದೆ. ಅದಾಗ್ಯೂ, ಹಣದ ವೇಗ $v$, ಸಮಯದ ಆಯಾಮವನ್ನು ಹೊಂದಿದೆ. ನಿರ್ದಿಷ್ಟ ಸಮಯದಲ್ಲಿ ದಾಸ್ತಾನಿನ ಘಟಕವು ಎಷ್ಟು ಬಾರಿ ಕೈಯನ್ನು ಬದಲಿಸುತ್ತದೆ ಎನ್ನುವುದನ್ನು ಸೂಚಿಸುತ್ತದೆ ಉದಾ: ಒಂದು ತಿಂಗಳು ಅಥವಾ ಒಂದು ವರ್ಷ ಇತ್ಯಾದಿ. ಹಾಗೆಯೇ ಎಡ ಭಾಗದಲ್ಲಿರುವ $v$. $M_T^d$ಯು ನಿರ್ದಿಷ್ಟ ಸಮಯದಲ್ಲಿ ಈ ದಾಸ್ತಾನಿನಿಂದ ಮಾಡಲಾದ ಹಣಕಾಸು ವಹಿವಾಟಿನ ಒಟ್ಟು ಮೌಲ್ಯವನ್ನು ಮಾಪನ ಮಾಡುತ್ತದೆ. ಇದು ಚಲಕದ ಪರಿಮಾಣವಾಗಿದೆ ಆದರಿಂದ ಇದು ಬಲಭಾಗಕ್ಕೆ ಸಮವಾಗಿರುತ್ತದೆ.

ಒಂದು ಅರ್ಥವ್ಯವಸ್ಥೆಯಲ್ಲಿನ ಒಂದು ನಿರ್ದಿಷ್ಟ ವರ್ಷದ (ನಾಮಮಾತ್ರ) ಒಟ್ಟು ದೇಶೀಯ ಉತ್ಪನ್ನದ ಮತ್ತು ಹಣದ ಸಮಗ್ರ ವಹಿವಾಟು ಬೇಡಿಕೆಯ ನಡುವಿನ ಸಂಬಂಧವನ್ನು ಅರಿಯುವುದೇ ನಮ್ಮ ಅಂತಿಮ ಉದ್ದೇಶ. ಒಂದು ಅರ್ಥವ್ಯವಸ್ಥೆಯ ವಾರ್ಷಿಕ ಒಟ್ಟು ವಹಿವಾಟಿನಲ್ಲಿ ಮಧ್ಯವರ್ತಿ ಸರಕುಗಳು ಮತ್ತು ಸೇವೆಗಳ ಎಲ್ಲಾ ವಹಿವಾಟುಗಳೂ ಒಳಗೊಂಡಿರುತ್ತದೆ ಮತ್ತು ಇದು ಸ್ಪಷ್ಟವಾಗಿ ನಾಮಮಾತ್ರ GDP ಗಿಂತ ಹೆಚ್ಚಾಗಿರುತ್ತದೆ. ಆದಾಗ್ಯೂ, ಸಾಮಾನ್ಯವಾಗಿ ವಹಿವಾಟಿನ ಮೌಲ್ಯ ಮತ್ತು ನಾಮಮಾತ್ರ GDPಯ ನಡುವೆ ಸ್ಥಿರವಾದ ಮತ್ತು ಧನಾತ್ಮಕವಾದ ಸಂಬಂಧವಿದೆ. ನಾಮಮಾತ್ರ GDPಯಲ್ಲಿ ಏರಿಕೆಯಾದಾಗ ವಹಿವಾಟಿನ ಒಟ್ಟು ಮೌಲ್ಯದಲ್ಲಿ ಏರಿಕೆಯಾಗುತ್ತದೆ ಹಾಗೂ ಅದರಿಂದಾಗಿ ವಹಿವಾಟು ಹಣದ ಬೇಡಿಕೆಯಲ್ಲಿ ಹೆಚ್ಚಳವಾಗಿತ್ತದೆ ಎನ್ನುವುದನ್ನು ಸಮೀಕರಣ (3.1) ಸೂಚಿಸುತ್ತದೆ. ಆ ರೀತಿಯಲ್ಲಿ ಸಾಮಾನ್ಯವಾಗಿ ಸಮೀಕರಣ (3.1)ನ್ನು ಈ ಕೆಳಗಿನಂತೆ ಮಾರ್ಪಡಿಸಬಹುದಾಗಿದೆ.

$$M_T^d = kPY \tag{3.3}$$

ಇಲ್ಲಿ Y ನೈಜ GDP ಮತ್ತು P ಸಾಮಾನ್ಯ ಬೆಲೆಗಳ ಮಟ್ಟ ಅಥವಾ GDP ಹಣದುಬ್ಬರವಾಗಿದೆ. ವಹಿವಾಟು ಹಣದ ಬೇಡಿಕೆ ಅರ್ಥವ್ಯವಸ್ಥೆಯ ನೈಜ ಆದಾಯದೊಂದಿಗೆ ಮತ್ತು ಸರಾಸರಿ ಬೆಲೆಯ ಮಟ್ಟದೊಂದಿಗೆ ಧನಾತ್ಮಕ ಸಂಬಂಧವನ್ನು ಹೊಂದಿದೆ ಎನ್ನುವುದನ್ನು ಮೇಲಿನ ಸಮೀಕರಣವು ತಿಳಿಸುತ್ತದೆ.

## ಸಟ್ಟಾ ವ್ಯಾಪಾರದ ಉದ್ದೇಶ *The Speculative Motive*

ಒಬ್ಬ ವ್ಯಕ್ತಿ ತನ್ನ ಸಂಪತ್ತನ್ನು ಭೂ ಆಸ್ತಿ, ಚಿನ್ನ, ಬಾಂಡುಗಳು ಮತ್ತು ಹಣದ ರೂಪದಲ್ಲಿ ಇಟ್ಟುಕೊಳ್ಳಬಹುದು. ಸರಳೀಕರಿಸುದಕ್ಕಾಗಿ ನಾವು ಈಗ ಹಣವನ್ನು ಹೊರತು ಪಡಿಸಿದ ಎಲ್ಲಾ ಆಸ್ತಿಗಳನ್ನು ಒಟ್ಟಾಗಿ 'ಬಾಂಡುಗಳು' ಎಂದು ಕರೆಯೋಣ. ವಿಶೇಷವಾಗಿ ನಿರ್ಧಿಷ್ಟ ಕಾಲಾವಧಿಯವರೆಗೆ ಭವಿಷ್ಯದ ಹಣಕಾಸಿನ ಪ್ರತಿಫಲದ, ಹರಿವಿನ ವಚನವನ್ನು ಹೊಂದಿರುವ ಕಾಗದಗಳೇ ಬಾಂಡುಗಳಾಗಿದೆ. ಸಾರ್ವಜನಿಕರಿಂದ ಹಣ ಸಾಲ ಪಡೆಯುವುದಕ್ಕಾಗಿ ಸರಕಾರ ಮತ್ತು ಉದ್ಯಮ ಘಟಕಗಳು ಇವುಗಳನ್ನು ಬಿಡುಗಡೆ ಮಾಡುತ್ತವೆ ಮತ್ತು ಇವುಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದು ಮತ್ತು ಮಾರಾಟ ಮಾಡಬಹುದಾಗಿದೆ. ಎರಡು–ಅವಧಿಯ ಬಾಂಡುಗಳನ್ನು ಪರಿಗಣಿಸೋಣ. ಒಂದು ಉದ್ಯಮ ಘಟಕವು ಸಾರ್ವಜನಿಕರಿಂದ ₹100 ಸಾಲವನ್ನು ಪಡೆಯಲು ಬಯಸುತ್ತದೆ. ಅದು ಮೊದಲ ವರ್ಷದ ಅಂತ್ಯಕ್ಕೆ ₹10 ಮತ್ತು ಎರಡನೇ ವರ್ಷದ ಅಂತ್ಯಕ್ಕೆ ಅಸಲು ₹100 ಮತ್ತು ಅದಕ್ಕೆ ₹10ನ್ನು ಸೇರಿಸಿ ನೀಡುವ ಖಾತರಿಯೊಂದಿಗೆ ಬಾಂಡನ್ನು ಬಿಡುಗಡೆ ಮಾಡುತ್ತದೆ. ಅಂತಹ ಬಾಂಡಿನ ಮುಖಬೆಲೆಯು ₹100 ಆಗಿದೆ, ಪರಿಪಕ್ವತೆಯ ಅವಧಿ ಎರಡು ವರ್ಷಗಳು ಮತ್ತು ಕೂಪನ್ ದರ ಶೇ.10 ಅಗಿರುತ್ತದೆ. ಬ್ಯಾಂಕಿನ ನಿಮ್ಮ ಉಳಿತಾಯ ಖಾತೆಯ ಪ್ರಚಲಿತ ಬಡ್ಡಿಯ ದರವು ಶೇ.5ಕ್ಕೆ ಸಮನಾಗಿದೆ ಎಂದು ಕಲ್ಪಿಸಿಕೊಳ್ಳಿರಿ. ಸ್ವಾಭಾವಿಕವಾಗಿ ನೀವು ಈ ಬಾಂಡಿನ ಮೇಲಿನ ಗಳಿಕೆಯನ್ನು ನಿಮ್ಮ ಉಳಿತಾಯ ಖಾತೆಯ ಬಡ್ಡಿ ಗಳಿಕೆಯೊಂದಿಗೆ ಹೋಲಿಸಲು ಬಯಸುವಿರಿ. ನೀವು ನಿಖರವಾಗಿ ಕೇಳುವ ಪ್ರಶ್ನೆ ಹೀಗಿರುತ್ತದೆ. ನನ್ನ ಉಳಿತಾಯ ಖಾತೆಯಲ್ಲಿ ಎಷ್ಟು ಹಣವನ್ನು ಇಟ್ಟರೆ ಅದು ವರ್ಷದ ಕೊನೆಯಲ್ಲಿ ₹10ನ್ನು ಸೃಷ್ಟಿಸಬಲ್ಲದು? ಈ ಮೊತ್ತವು X ಆಗಿರಲಿ ಎಂದುಕೊಳ್ಳೋಣ. ಆದ್ದರಿಂದ,

$$X\left(1+\frac{5}{100}\right)=10$$

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ

$$X=\frac{10}{\left(1+\frac{5}{100}\right)}$$

ಇಲ್ಲಿ X ಎಂಬುದು ಮಾರುಕಟ್ಟೆ ಬಡ್ಡಿದರದಲ್ಲಿ ವಟಾಯಿಸಿದ ₹ 10ರ ವರ್ತಮಾನ ಮೌಲ್ಯವಾಗಿದೆ. ಅದೇ ರೀತಿ ಎರಡು ವರ್ಷಗಳ ಅಂತ್ಯಕ್ಕೆ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಯಾವ ಮೊತ್ತವನ್ನು ಇಟ್ಟರೆ ₹ 110 ಸೃಷ್ಟಿಯಾಗುತ್ತದೋ ಆ ಮೊತ್ತವು Y ಆಗಿದೆ ಎಂದುಕೊಳ್ಳೋಣ. ಹೀಗೆ ಬಾಂಡಿನ ಪ್ರತಿಫಲದ ಹರಿವಿನ ವರ್ತಮಾನದ ಮೌಲ್ಯವು

$$PV=X+Y=\frac{10}{\left(1+\frac{5}{100}\right)}+\frac{10+100}{\left(1+\frac{5}{100}\right)^2}$$

ಇದಕ್ಕೆ ಸಮವಾಗಿರಲೇಬೇಕು. ಇಲ್ಲಿ PV = ವರ್ತಮಾನದ ಮೌಲ್ಯ

ಲೆಕ್ಕಾಚಾರವು ಇದು ಸುಮಾರು ₹109.29 ಆಗಿದೆಯೆಂದು ತಿಳಿಸುತ್ತದೆ. ಇದರರ್ಥ ನೀವು ₹109.29ನ್ನು ಬ್ಯಾಂಕಿನ ಉಳಿತಾಯ ಖಾತೆಯಲ್ಲಿಟ್ಟರೆ ಅದು ಬಾಂಡಿನ ಪ್ರತಿಫಲಕ್ಕೆ ಸಮಾನವಾದ ಪ್ರತಿಫಲವನ್ನು ನೀಡುತ್ತದೆ. ಆದರೆ ಬಾಂಡಿನ ಮಾರಾಟಗಾರನು ಅದನ್ನೇ ಕೇವಲ ₹100ರ ಮುಖಬೆಲೆಗೆ ನೀಡುತ್ತಿದ್ದಾನೆ. ಬ್ಯಾಂಕಿನ ಉಳಿತಾಯ ಖಾತೆಗಿಂತ ಬಾಂಡು ಹೆಚ್ಚು ಆಕರ್ಷಣೀಯ ಎನ್ನುವುದು ಸ್ಪಷ್ಟವಾಗಿದೆ ಮತ್ತು ಜನರು ಬಾಂಡನ್ನು ಪಡೆದುಕೊಳ್ಳಲು ಧಾವಿಸುತ್ತಾರೆ. ಸ್ಪರ್ಧಾತ್ಮಕ ಹರಾಜು, ಬಾಂಡಿನ ಬೆಲೆಯು ಅದರ PV ಬೆಲೆಗೆ ಸಮಾನವಾಗುವವರೆಗೆ, ಬಾಂಡಿನ ಬೆಲೆಯನ್ನು ಅದರ ಮುಖಬೆಲೆಗಿಂತ ಮೇಲೆ ಏರಿಸುತ್ತದೆ. ಬೆಲೆಯು PV ಗಿಂತ ಹೆಚ್ಚಾದರೆ ಬ್ಯಾಂಕ್ ಉಳಿತಾಯ ಖಾತೆಗೆ ಹೋಲಿಸಿದಾಗ ಬಾಂಡುಗಳ ಮೇಲಿನ ಆಕರ್ಷಣೆಯು ಕಡಿಮೆಯಾಗುತ್ತದೆ ಮತ್ತು ಜನರು ಅದನ್ನು ಬಿಟ್ಟು ಬಿಡಲು ಬಯಸುತ್ತಾರೆ. ಬಾಂಡುಗಳ ಅಧಿಕ ಪೂರೈಕೆಯು

ಬಾಂಡಿನ ಬೆಲೆಗಳ ಇಳಿಮುಖ ಒತ್ತಡಕ್ಕೆ ಕಾರಣವಾಗಿ ಪುನಃ ಹಿಂದಿನ PV ಗೆ ತರುತ್ತದೆ. ಪೈಪೋಟಿಯುತ ಆಸ್ತಿ ಮಾರುಕಟ್ಟೆಯ ಸ್ಥಿತಿಗತಿಗಳಲ್ಲಿ ಬಾಂಡಿನ ಬೆಲೆಯು ಯಾವಾಗಲೂ ಅದರ ಸಮತೋಲನದ ವರ್ತಮಾನದ ಮೌಲ್ಯಕ್ಕೆ ಸರಿ ಸಮಾನವಾಗಿರಬೇಕು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಈಗ ಮಾರುಕಟ್ಟೆ ಬಡ್ಡಿ ದರವು ಶೇ.5 ರಿಂದ ಶೇ.6ಕ್ಕೆ ಏರಿದೆಯೆಂದು ಪರಿಗಣಿಸೋಣ. ವರ್ತಮಾನ ಮೌಲ್ಯ ಮತ್ತು ಅದರಿಂದ ಬಾಂಡಿನ ಬೆಲೆಯು ಈ ರೀತಿಯಲ್ಲಿ ಆಗುತ್ತದೆ.

$$\frac{10}{\left(1+\frac{6}{100}\right)}+\frac{10+100}{\left(1+\frac{6}{100}\right)^2}=107.33 \quad \text{(ಸುಮಾರು)}$$

ಒಂದು ಬಾಂಡಿನ ಬೆಲೆಯು ಮಾರುಕಟ್ಟೆಯ ಬಡ್ಡಿದರವನ್ನು ವಿರುದ್ಧವಾಗಿ (ವಿಲೋಮವಾಗಿ) ಅನುಸರಿಸುತ್ತದೆ.

ವಿವಿಧ ಜನರು ಅರ್ಥವ್ಯವಸ್ಥೆಯ ಕುರಿತಾದ ತಮ್ಮ ಖಾಸಗಿ ಮಾಹಿತಿಗಳಿಂದಾಗಿ ಮಾರುಕಟ್ಟೆ ಬಡ್ಡಿ ದರದಲ್ಲಿನ ಭವಿಷ್ಯದ ಚಲನವಲನಗಳ ಬಗ್ಗೆ ವಿವಿಧ ನಿರೀಕ್ಷೆಗಳನ್ನು ಹೊಂದಿರುತ್ತಾರೆ. ಮಾರುಕಟ್ಟೆ ಬಡ್ಡಿ ದರವು ಕೊನೆಗೆ ವಾರ್ಷಿಕ ಶೇ.8ಕ್ಕೆ ಸ್ಥಿರವಾಗುತ್ತದೆಂದು ನೀವು ಯೋಚಿಸುವುದಾದರೆ, ಪ್ರಸ್ತುತ ದರ ಶೇ.5 ತುಂಬಾ ಕಡಿಮೆಯೆಂದು ನೀವು ಭಾವಿಸಬಹುದು. ಬಡ್ಡಿಯ ದರ ಹೆಚ್ಚಾಗುತ್ತದೆ ಮತ್ತು ಅದರ ಪರಿಣಾಮವಾಗಿ ಬಾಂಡಿನ ದರಗಳು ಕಡಿಮೆಯಾಗುತ್ತದೆ ಎಂದು ನೀವು ನಿರೀಕ್ಷಿಸಬಹುದು. ನೀವು ಬಾಂಡುಧಾರಕನಾಗಿದ್ದರೆ ಅಥವಾ ಬಾಂಡನ್ನು ಹೊಂದಿದ್ದರೆ ಬಾಂಡಿನ ಬೆಲೆಗಳಲ್ಲಿ ಆಗುವ ಇಳಿಕೆ ಎಂದರೆ ನಿಮಗೆ ನಷ್ಟವೆಂದೇ ಅರ್ಥ– ಇದು ಮಾರುಕಟ್ಟೆಯಲ್ಲಿ ಆಸ್ತಿಯ ಮೌಲ್ಯವು ಹಠಾತ್ ಕುಸಿಯುವುದರಿಂದ ನೀವು ಅನುಭವಿಸುವ ನಷ್ಟದಂತೆಯೇ ಇರುತ್ತದೆ. ಬಾಂಡಿನ ಬೆಲೆಗಳು ಕಡಿಮೆ ಆಗುವುದರಿಂದ ಆಗುವ ಅಂತಹ ನಷ್ಟವನ್ನು ಬಾಂಡುಧಾರಕನಿಗೆ ಆಗುವ ಬಂಡವಾಳ ನಷ್ಟವೆಂದು ಕರೆಯುತ್ತಾರೆ. ಅಂತಹ ಸನ್ನಿವೇಶದಲ್ಲಿ ನೀವು ನಿಮ್ಮ ಬಾಂಡನ್ನು ಮಾರಾಟ ಮಾಡಿ ಅದರ ಬದಲು ಹಣವನ್ನು ಇಟ್ಟುಕೊಳ್ಳಲು ಪ್ರಯತ್ನಿಸುತ್ತೀರಿ. ಹೀಗೆ ಬಡ್ಡಿಯ ದರ ಮತ್ತು ಬಾಂಡಿನ ಬೆಲೆಗಳಲ್ಲಿ ಭವಿಷ್ಯದ ಬಗೆಗಿನ ಊಹೆಗಳು ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಹೆಚ್ಚಿಸುತ್ತದೆ.

ಯಾವಾಗ ಬಡ್ಡಿ ದರವು ತುಂಬಾ ಮೇಲಕ್ಕೇರುತ್ತದೆಯೋ ಆಗ ಪ್ರತಿಯೊಬ್ಬರೂ ಅದು ಭವಿಷ್ಯದಲ್ಲಿ ಕಡಿಮೆಯಾಬಹುದು ಎನ್ನುವ ನಿರೀಕ್ಷೆಯಲ್ಲಿರುತ್ತಾರೆ ಮತ್ತು ಬಾಂಡುಗಳ್ನು ಹೊಂದುವುದರಿಂದಾಗುವ ಬಂಡವಾಳ ಗಳಿಕೆಯನ್ನು ನಿರೀಕ್ಷಿಸುತ್ತಾರೆ, ಇದರಿಂದಾಗಿ ಜನರು ತಮ್ಮ ಹಣವನ್ನು ಬಾಂಡುಗಳಿಗೆ ಪರಿವರ್ತಿಸುತ್ತಾರೆ. ಹೀಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಕಡಿಮೆಯಾಗುತ್ತದೆ. ಯಾವಾಗ ಬಡ್ಡಿ ದರ ಕಡಿಮೆಯಾಗುತ್ತದೆಯೋ ಹೆಚ್ಚು ಹೆಚ್ಚು ಜನರು ಅದು ಭವಿಷ್ಯದಲ್ಲಿ ಹೆಚ್ಚಾಗುವ ಹಾಗೂ ಬಂಡವಾಳ ನಷ್ಟದ ನಿರೀಕ್ಷೆಯಲ್ಲಿರುತ್ತಾರೆ. ಆಗ ಅವರು ತಮ್ಮ ಬಾಂಡುಗಳನ್ನು ಹಣಕ್ಕೆ ಪರಿವರ್ತಿಸುವುದು ಸಟ್ಟಾ ವ್ಯಾಪಾರದ ಉದ್ದೇಶದ ಅಧಿಕ ಹಣದ ಬೇಡಿಕೆಗೆ ಕಾರಣವಾಗುತ್ತದೆ. ಹೀಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಬಡ್ಡಿಯ ದರದೊಂದಿಗೆ ವಿಲೋಮ ಸಂಬಂಧವನ್ನು ಹೊಂದಿದೆ. ಒಂದು ಸರಳ ಮಾದರಿಯ ಕಲ್ಪನೆಯೊಂದಿಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಈ ರೀತಿಯಲ್ಲಿ ಬರೆಯಬಹುದು.

$$M_S^d = \frac{r_{max} - r}{r - r_{min}} \tag{3.4}$$

ಇಲ್ಲಿ $r$ ಎಂಬುದು ಮಾರುಕಟ್ಟೆ ಬಡ್ಡಿ ದರ ಮತ್ತು $r_{max}$ ಹಾಗೂ $r_{min}$ ಎಂಬುದು $r$ ನ ಮೇಲಿನ ಮಿತಿ ಮತ್ತು ಕೆಳಗಿನ ಮಿತಿಯಾಗಿದೆ., ಎರಡೂ ಧನಾತ್ಮಕ ಸ್ಥಿರಾಂಕಗಳಾಗಿವೆ. $r$ ಎಂಬುದು $r_{max}$ ದಿಂದ $r_{min}$ ಗೆ ಇಳಿಯುತ್ತದೆ, $M_S^d$ ನ ಮೌಲ್ಯವು 0 ಯಿಂದ $\infty$ ಗೆ ಏರುತ್ತದೆ ಎನ್ನುವುದನ್ನು ಸಮೀಕರಣ 3.4 ಸ್ಪಷ್ಟಪಡಿಸುತ್ತದೆ

ಮೊದಲೇ ತಿಳಿಸಿದಂತೆ ಬಡ್ಡಿ ದರವನ್ನು ಸದಾವಕಾಶ ವೆಚ್ಚ ಅಥವಾ ಹಣದ ಶಿಲ್ಕನ್ನು ಇಟ್ಟುಕೊಳ್ಳುವುದರ 'ಬೆಲೆ' ಎಂದೂ ಯೋಚಿಸಬಹುದಾಗಿದೆ. ಅರ್ಥವ್ಯವಸ್ಥೆಯಲ್ಲಿ ಹಣದ ಪೂರೈಕೆ ಹೆಚ್ಚಾದರೆ, ಜನರು ಈ ಹೆಚ್ಚುವರಿ ಹಣದಿಂದ ಬಾಂಡುಗಳನ್ನು ಖರೀದಿಸುತ್ತಾರೆ, ಬಾಂಡುಗಳ ಬೇಡಿಕೆಯು ಹೆಚ್ಚಾಗುತ್ತದೆ, ಬಾಂಡುಗಳ ಬೆಲೆ

ಹೆಚ್ಚಾಗುತ್ತದೆ ಮತ್ತು ಬಡ್ಡಿ ದರ ಕಡಿಮೆಯಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಅರ್ಥವ್ಯವಸ್ಥೆ ಅಲ್ಲಿ ಹಣದ ಪೂರೈಕೆ ಹೆಚ್ಚಾದಂತೆ ಹಣದ ಶಿಲ್ಕನ್ನು ಇಟ್ಟುಕೊಳ್ಳುವ ಬೆಲೆ ಅಂದರೆ ಬಡ್ಡಿಯ ದರ ಕಡಿಮೆ ಆಗಲೇಬೇಕು. ಆದಾಗ್ಯೂ ಮಾರುಕಟ್ಟೆ ಬಡ್ಡಿ ದರವು ಈಗಾಗಲೇ ಸಾಕಷ್ಟು ಕಡಿಮೆಯಾಗಿದ್ದರೆ, ಭವಿಷ್ಯದಲ್ಲಿ ಅದು ಹೆಚ್ಚಾಗಬಹುದೆಂಬ ನಿರೀಕ್ಷೆಯಲ್ಲಿ ಪ್ರತಿಯೊಬ್ಬರೂ ಇರುತ್ತಾರೆ ಇದು ಬಂಡವಾಳ ನಷ್ಟಕ್ಕೆ ಕಾರಣ ಆಗುತ್ತದೆ, ಯಾರೊಬ್ಬರೂ ಕೂಡಾ ಬಾಂಡುಗಳನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ. ಅರ್ಥವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮ್ಮ ಸಂಪತ್ತನ್ನು ಹಣದ ಶಿಲ್ಕಿನ ರೂಪದಲ್ಲಿ ಇಟ್ಟುಕೊಳ್ಳುವರು ಅರ್ಥವ್ಯವಸ್ಥೆಯೊಳಗೆ ಹೆಚ್ಚುವರಿ ಹಣವನ್ನು ಸೇರಿಸಿದರೆ ಅದು ಬಾಂಡಿನ ಬೇಡಿಕೆಯನ್ನು ಹೆಚ್ಚಿಸದೆ ತಳ ಮಟ್ಟದಲ್ಲಿರುವ ಬಡ್ಡಿ ದರ $r_{min}$ ಗಿಂತ ಕಡಿಮೆ ಮಾಡದೆ ಹಣದ ಶಿಲ್ಕಿಗಾಗಿ ಇರುವ ಜನರ ಹಂಬಲವನ್ನು ತಣಿಸಲು ಉಪಯೋಗಿಸಲಾಗುತ್ತದೆ. ಈ ತರಹದ ಸನ್ನಿವೇಶವನ್ನು **ದ್ರವ್ಯತೆಯ ಬಲೆ** ಎಂದು ಕರೆಯುತ್ತಾರೆ. ಇಲ್ಲಿ ಸಟ್ಟಾ ವ್ಯಾಪಾರದ ಇಲ್ಲಿ ಹಣದ ಬೇಡಿಕೆಯ ಕಾರ್ಯವು ಅನಂತ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ.




**ರೇಖಾಚಿತ್ರ 3.1** ಹಣದ ಸಟ್ಟಾ ವ್ಯಾಪಾರದ ಬೇಡಿಕೆ

ಚಿತ್ರ 3.1 ರಲ್ಲಿ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಸಮನಾಂತರ ಅಕ್ಷದಲ್ಲಿ ಮತ್ತು ಬಡ್ಡಿಯ ದರವನ್ನು ಲಂಬ ಅಕ್ಷದಲ್ಲಿ ಗುರುತಿಸಲಾಗಿದೆ. ಯಾವಾಗ $r = r_{max}$ ಆಗಿರುತ್ತದೋ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಶೂನ್ಯವಾಗಿರುತ್ತದೆ. ಬಡ್ಡಿ ದರವು ಎಷ್ಟು ಗರಿಷ್ಠವಾಗಿರುತ್ತದೆಂದರೆ, ಪ್ರತಿಯೊಬ್ಬರೂ ಭವಿಷ್ಯದಲ್ಲಿ ಅದು ಇಳಿಯುತ್ತದೆಂದು ನಿರೀಕ್ಷಿಸುತ್ತಾರೆ ಮತ್ತು ಆ ಮೂಲಕ ಭವಿಷ್ಯದ ಬಂಡವಾಳ ಲಾಭ ಗಳಿಸುವುದರ ಬಗ್ಗೆ ಖಾತ್ರಿಯಾಗಿರುತ್ತಾರೆ. ಹೀಗೆ ಪ್ರತಿಯೊಬ್ಬರೂ ಹಣದ ಶಿಲ್ಕನ್ನು ಬಾಂಡುಗಳಾಗಿ ಪರಿವರ್ತಿಸಿರುತ್ತಾರೆ. ಯಾವಾಗ $r = r_{min}$ ಆಗಿರುವುದೋ ಆಗ ಅರ್ಥವ್ಯವಸ್ಥೆಯು ದ್ರವ್ಯತೆಯ ಬಲೆಯಲ್ಲಿರುತ್ತದೆ. ಭವಿಷ್ಯದಲ್ಲಿ ಬಡ್ಡಿ ದರವು ಹೆಚ್ಚಾಗುವ ಮತ್ತು ಬಾಂಡಿನ ದರ ಕಡಿಮೆಯಾಗುವ ಖಚಿತತೆ ಪ್ರತಿಯೊಬ್ಬರಿಗೂ ಇರುತ್ತದೆ. ಪ್ರತಿಯೊಬ್ಬರೂ ತಾವು ಸಂಪಾದಿಸಿದ ಸಂಪತ್ತನ್ನು ಹಣದ ರೂಪದಲ್ಲಿ ಇಡುತ್ತಾರೆ ಮತ್ತು ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಅನಂತವಾಗಿರುತ್ತದೆ.

ಆದ್ದರಿಂದ ಅರ್ಥವ್ಯವಸ್ಥೆಯಲ್ಲಿ ಒಟ್ಟು ಹಣದ ಬೇಡಿಕೆಯು, ವಹಿವಾಟು ಬೇಡಿಕೆ ಮತ್ತು ಸಟ್ಟಾ ವ್ಯಾಪಾರದ ಬೇಡಿಕೆಯಿಂದ ಸಂಯೋಜಿತವಾಗಿರುತ್ತದೆ. ಇದರಲ್ಲಿ ಮೊದಲನೆಯದು ನೈಜ GDP ಮತ್ತು ಬೆಲೆಯ ಮಟ್ಟಕ್ಕೆ ಅನುಲೋಮವಾಗಿದ್ದರೆ ಎರಡನೆಯದು ಮಾರುಕಟ್ಟೆ ಬಡ್ಡಿಯ ದರಕ್ಕೆ ವಿಲೋಮವಾಗಿ ಇರುತ್ತದೆ. ಒಂದು ಅರ್ಥವ್ಯವಸ್ಥೆಯ ಸಮಗ್ರ ಹಣದ ಬೇಡಿಕೆಯನ್ನು ಈ ಕೆಳಗಿನ ಸಮೀಕರಣದಲ್ಲಿ ಸಂಕ್ಷೇಪಿಸಬಹುದಾಗಿದೆ.

$$M^d = M_T^d + M_S^d$$

ಅಥವಾ

$$M^d = kPY + \frac{r_{max} - r}{r - r_{min}} \qquad (3.5)$$

**ಹಣದ ಪೂರೈಕೆ: ವಿವಿಧ ಮಾಪನಗಳು *The Supply of Money: Various Measures***

ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಹಣವು ಮುಖ್ಯವಾಗಿ, ದೇಶದ ಹಣಕಾಸು ಪ್ರಾಧಿಕಾರವು ಚಲಾವಣೆಗೆ ತಂದಿರುವ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು ಒಳಗೊಂಡಿರುತ್ತದೆ. ಭಾರತದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕರೆನ್ಸಿ ನೋಟುಗಳನ್ನು ಚಲಾವಣೆಗೆ ತರುತ್ತದೆ. ಇದು ಭಾರತದಲ್ಲಿನ ಹಣಕಾಸು ಪ್ರಾಧಿಕಾರವಾಗಿದೆ. ಆದಾಗ್ಯೂ ಭಾರತ ಸರಕಾರವು ನಾಣ್ಯಗಳನ್ನು ಚಲಾವಣೆಗೆ ತರುತ್ತದೆ. ಏಕೆಂದರೆ ಈ ಖಾತೆಗಳ ಮೇಲೆ

ಬರೆಯಲಾದ ಚೆಕ್ಕುಗಳನ್ನು ವ್ಯವಹಾರಗಳನ್ನು ತೀರಿಸಲು ಬಳಸಲಾಗುತ್ತದೆ. ಕರೆನ್ಸಿ ನೋಟುಗಳು ಮತ್ತು ನಾಣ್ಯಗಳಲ್ಲದೆ ಸಾರ್ವಜನಿಕರು ವಾಣಿಜ್ಯ ಬ್ಯಾಂಕುಗಳಲ್ಲಿ ಹೊಂದಿರುವ ಉಳಿತಾಯಗಳ ಖಾತೆ, ಅಥವಾ ಚಾಲ್ತಿ ಖಾತೆಯ ಠೇವಣಿಗಳನ್ನೂ ಕೂಡಾ ಹಣವೆಂದು ಪರಿಗಣಿಸಲಾಗುತ್ತದೆ. ಖಾತೆದಾರನ ಬೇಡಿಕೆಯ ಮೇರೆಗೆ ಪಾವತಿ ಮಾಡುವುದರಿಂದ ಇಂತಹ ಠೇವಣಿಗಳನ್ನು ಬೇಡಿಕೆ ಠೇವಣಿಗಳು ಎಂದು ಕರೆಯುತ್ತಾರೆ. ಇತರೆ ಠೇವಣಿಗಳು ಉದಾ: ಪರಿಪಕ್ವತೆಗೆ ನಿಶ್ಚಿತ ಕಾಲಾವಧಿಯನ್ನು ಹೊಂದಿರುವ ನಿಶ್ಚಿತ ಠೇವಣಿಗಳನ್ನು **ಅವಧಿ ಠೇವಣಿ**ಗಳೆಂದು ಕರೆಯುತ್ತಾರೆ.

₹100 ಮೌಲ್ಯದ ವಸ್ತುಗಳನ್ನು ಅಂಗಡಿಯಿಂದ ಖರೀದಿಸಲು ₹100 ನೋಟನ್ನು ಬಳಸಬಹುದು, ಆದಾಗ್ಯೂ ಕಾಗದದ ಮೌಲ್ಯ ನಗಣ್ಯವಾಗಿರುತ್ತದೆ–ಖಂಡಿತವಾಗಿಯೂ ಅದು ₹100 ಕ್ಕಿಂತ ಕಡಿಮೆಯಿರುತ್ತದೆ. ಹಾಗೆಯೇ ಐದು ರೂಪಾಯಿ ನಾಣ್ಯದಲ್ಲಿರುವ ಲೋಹದ ಮೌಲ್ಯವು ಬಹುಶಃ ₹5 ಬೆಲೆಯಷ್ಟಿಲ್ಲ. ನೋಟು ಮತ್ತು ನಾಣ್ಯಗಳ ಮೌಲ್ಯಕ್ಕಿಂತ ಸರಕುಗಳ ಮೌಲ್ಯ ಹೆಚ್ಚಾಗಿದ್ದರೂ ಏಕೆ ಜನರು ಅಂತಹ ನೋಟು ಮತ್ತು ನಾಣ್ಯಗಳನ್ನು ಸರಕುಗಳ ವಿನಿಮಯದಲ್ಲಿ ಒಪ್ಪಿಕೊಳ್ಳುತ್ತಾರೆ? ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ಮೌಲ್ಯವನ್ನು ಅವುಗಳನ್ನು ಚಲಾವಣೆಗೆ ತರುವ ಪ್ರಾಧಿಕಾರ ಒದಗಿಸಿರುವ ಖಾತರಿಯಿಂದ ಪಡೆಯಲಾಗಿದೆ. ಯಾರಾದರೂ ನೋಟನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಅಥವಾ ಇತರೆ ಯಾವುದೇ ವಾಣಿಜ್ಯ ಬ್ಯಾಂಕಿಗೆ ನೀಡಿದಲ್ಲಿ ಆ ವ್ಯಕ್ತಿಗೆ ನೋಟಿನ ಮೇಲೆ ಮುದ್ರಿತವಾದ ಮೌಲ್ಯಕ್ಕೆ ಸಮಾನವಾದ ಖರೀದಿಯ ಸಾಮರ್ಥ್ಯವನ್ನು ನೀಡುವ ಜವಾಬ್ದಾರಿ ಭಾರತೀಯ ರಿಸರ್ವ್ ಬ್ಯಾಂಕಿನದ್ದಾಗಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್‌ರವರ ವಾಗ್ದಾನವು ಪ್ರತಿ ಕರೆನ್ಸಿ ನೋಟಿನ ಮೇಲಿರುತ್ತದೆ. ನಾಣ್ಯಗಳ ವಿಷಯದಲ್ಲೂ ಇದೇ ಸರಿ. ಆದ್ದರಿಂದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು **ಫಿಯೆಟ್ ಹಣ** ಎಂದು ಕರೆಯುತ್ತಾರೆ. ಬೆಳ್ಳಿ ಅಥವಾ ಬಂಗಾರದ ನಾಣ್ಯಗಳಂತೆ ಅವುಗಳಿಗೆ **ಆಂತರಿಕ ಮೌಲ್ಯ**ವಿರುವುದಿಲ್ಲ. ಯಾವುದೇ ವಿಧಧ ವ್ಯವಹಾರವನ್ನು ಚುಕ್ತಾ ಮಾಡಲು ಈ ಹಣವನ್ನು ಬಳಸಿದಾಗ ದೇಶದ ಪ್ರಜೆಗಳ್ಯಾರೂ ಅದನ್ನು ತಿರಸ್ಕರಿಸಲು ಸಾಧ್ಯವಾಗದ ಕಾರಣ ಇವುಗಳನ್ನು **ಶಾಸನ ಬದ್ಧ** ಹಣ ಎಂದು ಕರೆಯುತ್ತಾರೆ. ಉಳಿತಾಯ ಅಥವಾ ಚಾಲ್ತಿ ಖಾತೆಯ ಮೇಲೆ ಬರೆಯಲಾದ ಚೆಕ್ಕುಗಳನ್ನು ವಿನಿಮಯದ ಮಾಧ್ಯಮವಾಗಿ ಬಳಸಿದಾಗ ಯಾರು ಬೇಕಾದರೂ ಅದನ್ನು ತಿರಸ್ಕರಿಸಬಹುದು. ಆದ್ದರಿಂದ ಬೇಡಿಕೆ ಠೇವಣಿಗಳು ಶಾಸನಬದ್ಧ ಹಣವಲ್ಲ.

### ಶಾಸನಾತ್ಮಕ ವ್ಯಾಖ್ಯಾನಗಳು: ಸಂಕುಚಿತ ಹಣ ಮತ್ತು ವಿಶಾಲ ಹಣ
### *Legal Definitions: Narrow and Broad Money*

ಹಣದ ಬೇಡಿಕೆಯಂತೆ ಹಣದ ಪೂರೈಕೆಯೂ ಕೂಡಾ ದಾಸ್ತಾನು ಚಲಕವಾಗಿದೆ. ಒಂದು ನಿರ್ಧಿಷ್ಟ ಸಮಯದಲ್ಲಿ ಸಾರ್ವಜನಿಕರ ನಡುವೆ ಚಲಾವಣೆಯಾಗುವ ಹಣದ ಒಟ್ಟು ದಾಸ್ತಾನನ್ನು ಹಣದ ಪೂರೈಕೆಯೆಂದು ಕರೆಯಲಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್, ಹಣದ ಪೂರೈಕೆಯ ಅಂಕಿ ಅಂಶಗಳನ್ನು ನಾಲ್ಕು ಪರ್ಯಾಯ ಮಾಪನಗಳನ್ನು ಪ್ರಕಟಿಸುತ್ತದೆ. ಅವುಗಳೆಂದರೆ M1, M2, M3 ಮತ್ತು M4. ಅವುಗಳನ್ನು ಈ ರೀತಿಯಲಿ ವ್ಯಾಖ್ಯಾನಿಸಬಹುದಾಗಿದೆ.

M1 = CU + DD

M2 = M1 + ಅಂಚೆ ಕಛೇರಿ ಉಳಿತಾಯ ಬ್ಯಾಂಕಿನಲ್ಲಿರುವ ಉಳಿತಾಯ ಠೇವಣಿಗಳು.

M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿನ ನಿವ್ವಳ ಅವಧಿ ಠೇವಣಿಗಳು.

M4 = M3 + ಅಂಚೆ ಕಛೇರಿಯಲ್ಲಿರುವ ಒಟ್ಟು ಠೇವಣಿಗಳು (ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಹೊರತು ಪಡಿಸಿ)

ಇಲ್ಲಿ CU ಎಂದರೆ ಸಾರ್ವಜನಿಕರು ಹೊಂದಿರುವ ಕರೆನ್ಸಿ (ನೋಟುಗಳು + ನಾಣ್ಯಗಳು) ಮತ್ತು DD ಎಂದರೆ ವಾಣಿಜ್ಯ ಬ್ಯಾಂಕಿನಲ್ಲಿರುವ ಬೇಡಿಕೆ ಠೇವಣಿಗಳು. ಹಣದ ಪೂರೈಕೆಗೆ ಸೇರಿಸಲಾಗುವ, ಬ್ಯಾಂಕುಗಳಲ್ಲಿರುವ ಸಾರ್ವಜನಿಕರ ಠೇವಣಿಗಳನ್ನು ಮಾತ್ರ 'ನಿವ್ವಳ' ಎಂಬ ಪದವು ಸೂಚಿಸುತ್ತದೆ. ಒಂದು ಬ್ಯಾಂಕು ಇತರ ವಾಣಿಜ್ಯ ಬ್ಯಾಂಕುಗಳಲ್ಲಿ ಹೊಂದಿರುವ ಅಂತರ ಬ್ಯಾಂಕು ಠೇವಣಿಗಳನ್ನು ಹಣದ ಪೂರೈಕೆಯ ಭಾಗವೆಂದು ಪರಿಗಣಿಸಲಾಗುವುದಿಲ್ಲ.

M1 ಮತ್ತು M2 ಗಳನ್ನು **ಸಂಕುಚಿತ ಹಣವೆಂದು** ಕರೆಯಲಾಗಿತ್ತದೆ. M3 ಮತ್ತು M4 ಗಳನ್ನು **ವಿಶಾಲ ಹಣವೆಂದು** ಕರೆಯಲಾಗಿತ್ತದೆ. ಈ ಹಂತಗಳು ದ್ರವ್ಯತೆಯ ಅವರೋಹಣ ಕ್ರಮದಲ್ಲಿ ಇರುತ್ತವೆ. M1 ವ್ಯವಹಾರದಲ್ಲಿ ಅತ್ಯಂತ ಹೆಚ್ಚು ದ್ರವ್ಯತೆ ಮತ್ತು ಸುಲಭವಾಗಿದ್ದರೆ M4 ಎಲ್ಲಕ್ಕಿಂತ ಕಡಿಮೆ ದ್ರವ್ಯತೆ ಹೊಂದಿರುತ್ತದೆ. M3 ಹಣದ ಪೂರೈಕೆಯ ಮಾಪನದ ಅತ್ಯಂತ ಸಾಮಾನ್ಯ ವಿಧಾನವಾಗಿದೆ. ಇದನ್ನು **ಸಮಗ್ರ ಹಣಕಾಸಿನ ಸಂಪನ್ಮೂಲ**[2] ಎಂದೂ ಕರೆಯಲಾಗುತ್ತದೆ.

**ಪೆಟ್ಟಿಗೆ 3.2 ಅನಾಣ್ಯೀಕರಣ *Demonetisation***

ಅನಾಣ್ಯೀಕರಣವು ಆರ್ಥಿಕತೆಯಲ್ಲಿನ ಭ್ರಷ್ಟಾಚಾರ, ಕಾಳಧನ, ಭಯೋತ್ಪಾದಕತೆ ಮತ್ತು ನಕಲಿ ಕರೆನ್ಸಿಯ ಚಲಾವಣೆಯಂತಹ ಸಮಸ್ಯೆಗಳನ್ನು ನಿಭಾಯಿಸಲು ಭಾರತ ಸರಕಾರವು ನವೆಂಬರ್ 2016 ರಲ್ಲಿ ಜಾರಿಗೆ ತಂದಿರುವ ಹೊಸ ಉಪಕ್ರಮವಾಗಿದೆ. ರೂ.500 ಮತ್ತು ರೂ.1000 ರ ಹಳೆಯ ಕರೆನ್ಸಿ ನೋಟುಗಳು ಶಾಸನ ಬದ್ಧ ಹಣವಾಗಿ ಮುಂದುವರಿಯುವುದಿಲ್ಲ. ರೂ.500 ಮತ್ತು ರೂ.2000 ದ ಮುಖಬೆಲೆಯ ಹೊಸ ಕರೆನ್ಸಿ ನೋಟುಗಳನ್ನು ಬಿಡುಗಡೆ ಮಾಡಲಾಯಿತು. ಹಳೆಯ ಕರೆನ್ಸಿ ನೋಟುಗಳನ್ನು 31 ಡಿಸೆಂಬರ್ 2016 ರವರೆಗೆ ಯಾವುದೇ ಘೋಷಣೆಗಳಿಲ್ಲದೆಯೇ ತಮ್ಮ ಬ್ಯಾಂಕಿನಲ್ಲಿ ಮತ್ತು 31 ಮಾರ್ಚ್ 2017 ರವರೆಗೆ ಘೋಷಣೆಯೊಂದಿಗೆ ಖಃಖ ನಲ್ಲಿ ಠೇವಣಿಯಾಗಿ ಇಡುವಂತೆ ಸಾರ್ವಜನಿಕರಿಗೆ ಸಲಹೆ ನೀಡಲಾಯಿತು.

ನಂತರದಲ್ಲಿ ಸಂಪೂರ್ಣ ಕುಸಿತವನ್ನು ಮತ್ತು ನಗದು ಸಂಧಿಗ್ದತೆಯನ್ನು ತಡೆಯಲು ಪ್ರತೀ ವ್ಯಕ್ತಿಗೆ, ಪ್ರತೀ ದಿನ ರೂ.4000 ದಷ್ಟು ಹಳೆಯ ಕರೆನ್ಸಿಗಳನ್ನು ಹೊಸ ಕರೆನ್ಸಿಗೆ ವಿನಿಮಯ ಮಾಡಿಕೊಳ್ಳಲು ಸರಕಾರ ಅನುಮತಿ ನೀಡಿತು. ಮುಂದುವರಿದು 12 ಡಿಸೆಂಬರ್ 2016 ರವರೆಗೆ ಪೆಟ್ರೋಲ್ ಪಂಪ್, ಸರಕಾರಿ ಆಸ್ಪತ್ರೆಗಳಲ್ಲಿ ಮತ್ತು ತೆರಿಗೆ, ವಿದ್ಯುಚ್ಛಕ್ತಿ ಬಿಲ್ ಮುಂತಾದ ಸರಕಾರದ ಬಾಕಿಗಳ ಪಾವತಿಯಲ್ಲಿ ಹಳೆಯ ಕರೆನ್ಸಿ ನೋಟುಗಳ ಶಾಸನ ಬದ್ಧ ಸ್ವೀಕಾರಕ್ಕೆ ಅವಕಾಶ ಕಲ್ಪಿಸಿತು.

ಈ ನಡೆಯು ಮೆಚ್ಚುಗೆ ಮತ್ತು ಟೀಕೆ ಎರಡನ್ನೂ ಪಡೆಯಿತು. ಬ್ಯಾಂಕಿನ ಮತ್ತು ೦ಖಿಒ ಬೂತ್‌ಗಳ ಹೊರಗಡೆ ಉದ್ದನೆಯ ಸಾಲು ಕಂಡು ಬರುತ್ತಿತ್ತು. ಚಲಾವಣೆಯಲ್ಲಿನ ಕರೆನ್ಸಿಯ ಕೊರತೆಯು ಆರ್ಥಿಕ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಆದಾಗ್ಯೂ ಸಮಯದೊಂದಿಗೆ ವಸ್ತುಸ್ಥಿತಿ ಸುಧಾರಿಸಿತು ಮತ್ತು ಸಹಜತೆಗೆ ಮರಳಿತು.

ಈ ನಡೆಯು ಸಕಾರಾತ್ಮಕ ಪರಿಣಾಮವನ್ನೂ ಕೂಡಾ ಹೊಂದಿದೆ. ಇದು ತೆರಿಗೆ ಅನುಸರಣೆಯನ್ನು ಸುಧಾರಿಸಿ ಭಾರೀ ಸಂಖ್ಯೆಯಲ್ಲಿ ಜನರನ್ನು ತೆರಿಗೆಯ ಪರಿಧಿಯೊಳಗೆ ತಂದಿತು. ವ್ಯಕ್ತಿಯ ಉಳಿತಾಯವು ಔಪಚಾರಿಕ ಹಣಕಾಸು ವ್ಯವಸ್ಥೆಯೊಳಗೆ ಸಾಗುವಂತೆ ಮಾಡಿತು. ಇದರ ಫಲವಾಗಿ ಕಡಿಮೆ ಬಡ್ಡಿ ದರದಲ್ಲಿ ಅಧಿಕ ಸಾಲವನ್ನು ನೀಡುವುದಕ್ಕಾಗಿ ಬ್ಯಾಂಕುಗಳು ತಮ್ಮ ವಿಲೇವಾರಿಗಾಗಿ ಹೆಚ್ಚು ಸಂಪನ್ಮೂಲವನ್ನು ಹೊಂದುವಂತಾಯಿತು. ತೆರಿಗೆ ವಂಚನೆಯನ್ನು ಬಹಳ ಕಾಲ ಸಹಿಸಲು ಸಾಧ್ಯವಿಲ್ಲ ಎನ್ನುವುದನ್ನು ತೋರಿಸುತ್ತಾ ಕಾಳ ಧನವನ್ನು ಮಟ್ಟಹಾಕುವ ಸರಕಾರದ ನಿರ್ಧಾರವನ್ನು ಇದು ಪ್ರಮಾಣೀಕರಿಸಿತು. ತೆರಿಗೆ ವಂಚನೆಯು ಹಣಕಾಸಿನ ದಂಡನೆ ಮತ್ತು ಸಾಮಾಜಿಕ ಖಂಡನೆಗೆ ಒಳಪಟ್ಟರೆ ತೆರಿಗೆ ಅನುಸರಣೆಯು ಸುಧಾರಿಸುವುದಲ್ಲದೆ ಭ್ರಷ್ಟಾಚಾರವು ಕಡಿಮೆಯಾಗುತ್ತದೆ. ನಗದು ಆರ್ಥಿಕತೆಯ ಹೊರಗಿನ ವಹಿವಾಟುಗಳೆಲ್ಲವೂ ಔಪಚಾರಿಕ ಪಾವತಿ ವ್ಯವಸ್ಥೆಯೊಳಗೆ ಸ್ಥಾನಾಂತರಗೊಳ್ಳುವ ಮೂಲಕ ಇನ್ನೊಂದು ರೀತಿಯಲ್ಲಿ ಅನಾಣ್ಯೀಕರಣವು ತೆರಿಗೆ ಆಡಳಿತಕ್ಕೆ ಸಹಕಾರಿಯಾಗಿದೆ. ಕುಟುಂಬ ಮತ್ತು ಉದ್ಯಮಗಳು ನಗದಿನಿಂದ ವಿದ್ಯುನ್ಮಾನ ಪಾವತಿ ತಂತ್ರಜ್ಞಾನದೆಡೆಗೆ ಬದಲಾಯಿಸಲು ಪ್ರಾರಂಭಿಸಿದವು.

[2] ಕಾಲಾವಧಿಯಲ್ಲಿ M1 ಮತ್ತು M3 ನಡುವಿನ ವ್ಯತ್ಯಾಸದ ಅಂದಾಜಿಗಾಗಿ ಅನುಬಂಧ 3.2 ನ್ನು ನೋಡಿ.

## ಸಾರಾಂಶ *Summary*

ಹಣವನ್ನು ಮಾಧ್ಯಮವಾಗಿ ಬಳಸದೇ ನಡೆಯುವ ಸರಕುಗಳ ವಿನಿಮಯವನ್ನು ವಸ್ತು ವಿನಿಮಯ ಪದ್ಧತಿ ಎಂದು ಕರೆಯುತ್ತಾರೆ. ಇದು ಬಯಕೆಗಳ ದ್ವಿಮುಖ ಹೊಂದಾಣಿಕೆಯ ಕೊರತೆಯಿಂದ ಬಳಲುತ್ತಿತ್ತು. ಸಾರ್ವತ್ರಿಕವಾದ ಒಪ್ಪಿಗೆಯಿರುವ ವಿನಿಮಯದ ಮಾಧ್ಯಮವಾಗಿ ಕಾರ್ಯ ನಿರ್ವಹಿಸಿ ಹಣವು ವಿನಿಮಯವನ್ನು ಸುಗಮಗೊಳಿಸುತ್ತದೆ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಜನರು ಎರಡು ಉದ್ದೇಶಗಳಿಗಾಗಿ ಜನರು ಹಣವನ್ನು ಇಟ್ಟುಕೊಳ್ಳಲು ಬಯಸುತ್ತಾರೆ–ವ್ಯವಹಾರದ ಉದ್ದೇಶ ಮತ್ತು ಸಟ್ಟಾ ವ್ಯಾಪಾರದ ಉದ್ದೇಶ. ಹಣದ ಪೂರೈಕೆ, ಇನ್ನೊಂದು ಕಡೆ ಕರೆನ್ಸಿ ನೋಟು ಮತ್ತು ನಾಣ್ಯಗಳು, ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಮತ್ತು ಅವಧಿ ಠೇವಣಿಗಳನ್ನು ಒಳಗೊಂಡಿದೆ. ದ್ರವ್ಯತೆಯ ಇಳಿಕೆಯ ಆಧಾರದಲ್ಲಿ ಅದನ್ನು ಸಂಕುಚಿತ ಮತ್ತು ವಿಶಾಲ ಎಂದು ವರ್ಗೀಕರಿಸಲಾಗಿದೆ. ಭಾರತದಲ್ಲಿ ಹಣದ ಪೂರೈಕೆಯು ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುತ್ತದೆ. ಅದು ದೇಶದ ಹಣಕಾಸು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರ ವಿವಿಧ ಚಟುವಟಿಕೆಗಳು, ದೇಶದ ವಾಣಿಜ್ಯ ಬ್ಯಾಂಕುಗಳು ಮತ್ತು RBI ಇವುಗಳು ಅರ್ಥವ್ಯವಸ್ಥೆಯಲ್ಲಿನ ಹಣದ ಪೂರೈಕೆಯ ಬದಲಾವಣೆಗಳಿಗೆ ಕಾರಣವಾಗಿವೆ. ಅಧಿಕ ಶಕ್ತಿಯ ಸಂಗ್ರಹ, ಬ್ಯಾಂಕ್ ದರ ಮತ್ತು ವಾಣಿಜ್ಯ ಬ್ಯಾಂಕುಗಳ ಮೀಸಲು ಇತ್ಯಾದಿಗಳನ್ನು RBI ನಿಯಂತ್ರಿಸುತ್ತದೆ. ಆರ್ಥಿಕತೆಯ ಬಾಹ್ಯ ಆಘಾತಗಳ ವಿರುದ್ಧ ಕೂಡ ಹಣದ ಪೂರೈಕೆಯಲ್ಲಿ ಸ್ಥಿರತೆಯನ್ನು ತರುತ್ತದೆ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ವಸ್ತು ವಿನಿಮಯ ಪದ್ಧತಿ | ಬಯಕೆಗಳ ದ್ವಿಮುಖ ಹೊಂದಾಣಿಕೆ |
| ಹಣ | ವಿನಿಮಯದ ಮಾಧ್ಯಮ |
| ಲೆಕ್ಕದ ಘಟಕ | ಮೌಲ್ಯ ಸಂಗ್ರಾಹಕ |
| ವ್ಯವಹಾರದ ಬೇಡಿಕೆ | ಸಟ್ಟಾ ವ್ಯಾಪಾರದ ಉದ್ದೇಶ |
| ಬಾಂಡುಗಳು | ಪ್ರಸಕ್ತ ಮೌಲ್ಯ |
| ಬಡ್ಡಿಯ ದರ | ಬಂಡವಾಳ ಲಾಭ ಅಥವಾ ನಷ್ಟ |
| ದ್ರವ್ಯತೆಯ ಬಲೆ | ಫಿಯೆಟ್ ಹಣ |
| ಶಾಸನ ಬದ್ಧ | ಸಂಕುಚಿತ ಹಣ |
| ವಿಶಾಲ ಹಣ | ಸಮಗ್ರ ಹಣಕಾಸಿನ ಸಂಪನ್ಮೂಲಗಳು |
| ಕರೆನ್ಸಿ ಠೇವಣಿ ಅನುಪಾತ | ಮೀಸಲು ಠೇವಣಿ ಅನುಪಾತ |
| ಅಧಿಕ ಶಕ್ತಿಯ ಹಣ | ಹಣ ಗುಣಕ |
| ಅಂತಿಮ ಋಣದಾತ | ಕೇಂದ್ರ ಬ್ಯಾಂಕಿನ ಸಾಲದ ಮೂಲಕ ಕೊರತೆಯ ಹಣಕಾಸು |
| ಮುಕ್ತ ಮಾರುಕಟ್ಟೆ ಕಾರ್ಯಾಚರಣೆ | ಬ್ಯಾಂಕ್ ದರ |
| ನಗದು ಮೀಸಲು ಅನುಪಾತ (CRR) | ಶಾಸನ ಬದ್ಧ ದ್ರವ್ಯತಾ ಅನುಪಾತ (SLR) |
| ಸ್ಥಿರೀಕರಣ | |

1. ವಸ್ತು ವಿನಿಮಯ ಪದ್ಧತಿ ಎಂದರೇನು? ಅದರ ದೋಷಗಳಾವುವು?
2. ಹಣದ ಪ್ರಮುಖ ಕಾರ್ಯಗಳಾವುವು? ಹೇಗೆ ಹಣವು ವಸ್ತು ವಿನಿಮಯ ಪದ್ಧತಿಯ ದೋಷಗಳನ್ನು ಪರಿಹರಿಸಿದೆ?
3. ಹಣದ ವ್ಯವಹಾರದ ಬೇಡಿಕೆ ಎಂದರೇನು? ಹೇಗೆ ಇದು ನಿರ್ಧಿಷ್ಟ ಕಾಲಾವಧಿಯಲ್ಲಿ ವ್ಯವಹಾರದ ಮೌಲ್ಯಕ್ಕೆ ಸಂಬಂಧಿಸಿದೆ?
4. ಭಾರತದಲ್ಲಿ ಹಣದ ಪೂರೈಕೆಯ ಪರ್ಯಾಯ ವ್ಯಾಖ್ಯಾನಗಳು ಯಾವುವು?
5. ಶಾಸನಬದ್ಧ ಹಣ ಎಂದರೇನು? ಫಿಯೆಟ್ ಹಣ ಎಂದರೇನು?
6. ಅಧಿಕ ಶಕ್ತಿಯ ಹಣ ಎಂದರೇನು?
7. ವಾಣಿಜ್ಯ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ
8. ಹಣದ ಗುಣಕ ಎಂದರೇನು? ಗುಣಕದ ಮೌಲ್ಯವನ್ನು ಯಾವುದು ನಿರ್ಧರಿಸುತ್ತದೆ?
9. RBI ನ ಹಣಕಾಸು ನೀತಿಯ ಸಾಧನಗಳು ಯಾವುವು?
10. ವಾಣಿಜ್ಯ ಬ್ಯಾಂಕುಗಳು ಅರ್ಥವ್ಯವಸ್ಥೆಯಲ್ಲಿ ಹಣವನ್ನು ಸೃಷ್ಟಿಸುತ್ತದೆ ಎಂಬುದನ್ನು ನೀವು ಪರಿಗಣಿಸುತ್ತೀರಾ?
11. 'ಅಂತಿಮ ಋಣದಾತ'ನಾಗಿ RBI ನ ಪಾತ್ರವನ್ನು ಏನೆಂದು ತಿಳಿಯಲಾಗುತ್ತದೆ?

## ಸೂಚಿತ ಅಧ್ಯಯನಗಳು *Suggested Readings*


1. Dornbusch, R. and S. Fischer. 1990. Macroeconomics, (fifth edition) pages 345 -427, McGraw Hill, Paris.
2. Branson, W. H., 1992. Macroeconomic Theory and Policy, (second edition), Pages 243 – 280, Harper Collins Publishers India Pvt. Ltd., New Delhi.
3. Sikdar, S., 2006. Principles of Macroeconomics, pages 77 – 89, Oxford University Press, New Delhi.


ಅನುಬಂಧ *Appendix* 3.1

### ಅನಂತವಾದ ಜ್ಯಾಮಿತಿ ಶ್ರೇಣಿಗಳ ಮೊತ್ತ

ಕೆಳಗಿನ ರೂಪದ ಒಂದು ಅನಂತವಾದ ಜ್ಯಾಮಿತಿ ಶ್ರೇಣಿಗಳ ಮೊತ್ತವನ್ನು ಕಂಡುಹಿಡಿಯ ಬೇಕಾಗಿದೆ.

$S = a + a.r + a.r2 + a.r3 + \cdots + a.rn \cdots \infty$

ಇಲ್ಲಿ $a$ ಮತ್ತು $r$ ಗಳು ನೈಜ ಸಂಖ್ಯೆಗಳಾಗಿವೆ ಮತ್ತು $0 < r < 1$. ಆಗಿದೆ. ಮೊತ್ತವನ್ನು ಪಡೆಯ ಬೇಕಾಗಿದರೆ ಮೇಲಿನ ಸಮೀಕರಣವನ್ನು $r$ ನಿಂದ ಗುಣಿಸಿ.

$r.S = a.r + a.r2 + a.r3 + \cdots + a.r\, n + 1 \cdots \infty$

ಮೊದಲನೆ ಸಮೀಕರಣದಿಂದ ಎರಡನೇ ಸಮೀಕರಣವನ್ನು ಕಳೆದರೆ ಸಿಗುವುದು

$$S - r.\,S = a \text{ ಅಥವಾ, } (1 - r)S = a$$

ಇದು $S = \dfrac{a}{1-r}$ ನ್ನು ಕೊಡುತ್ತದೆ.

ಹಣದ ಗುಣಕದ ನಿಷ್ಪತ್ತಿಯನ್ನು ಪಡೆಯಲು ಉಪಯೋಗಿಸಿದ ಉದಾಹರಣೆಯಲ್ಲಿ, $a = 1$ ಮತ್ತು $r = 0.4$. ಹೀಗಾಗಿ ಅನಂತವಾದ ಶ್ರೇಣಿಗಳ ಮೌಲ್ಯವು

$$\frac{1}{1-0.4} = \frac{5}{3}$$

**ಭಾರತದಲ್ಲಿ ಹಣದ ಪೂರೈಕೆ**

**ಕೊಷ್ಟಕ 3.4: ಕಾಲಾವಧಿಯಲ್ಲಿ M1 ಮತ್ತು M3 ಗಳಲ್ಲಿ ಆದ ಬದಲಾವಣೆ**

| ವರ್ಷ | M1 | M3 |
|---|---|---|
| 1999-00 | 3417.96 | 11241.74 |
| 2000-01 | 3794.33 | 13132.04 |
| 2001-02 | 4228.24 | 14983.36 |
| 2002-03 | 4735.58 | 17179.6 |
| 2003-04 | 5786.94 | 20056.54 |
| 2004-05 | 6497.66 | 22456.53 |
| 2005-06 | 8263.89 | 27194.93 |
| 2006-07 | 9679.25 | 33100.38 |
| 2007-08 | 11558.10 | 40178.55 |
| 2008-09 | 12596.71 | 47947.75 |
| 2009-10 | 14893.68 | 56026.98 |
| 2010-11 | 16383.45 | 65041.16 |
| 2011-12 | 17373.94 | 73848.31 |
| 2012-13 | 18975.26 | 83898.19 |
| 2013-14 | 20597.62 | 95173.86 |
| 2014-15 | 22924.04 | 105501.68 |
| 2015-16 | 26105.67 | 116543.39 |

**Source:** *Handbook of statistics on Indian Economy, Reserve Bank of India 2015-16*

ಎರಡು ಕಾಲಂಗಲ ನಡುವಿನ ಮೌಲ್ಯದಲ್ಲಿನ ವ್ಯತ್ಯಾಸದ ಕಾರಣವು ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಅವಧಿ ಠೇವಣಿಯಾಗಿದೆ.

## ಕಾಲಾವಧಿಯಲ್ಲಿ ಹಣಕಾಸಿನ ಆಧಾರದ ಮೂಲಗಳ ರಚನೆಯಲ್ಲಿ ಆದ ಬದಲಾವಣೆಗಳು
## ಹಣದ ದಾಸ್ತಾನಿನ ಅಂಶಗಳು

**ಕೊಷ್ಟಕ 3.5: ಹಣಕಾಸಿನ ಆಧಾರದ ಮೂಲಗಳಲ್ಲಿ ಆದ ಬದಲಾವಣೆ**

| ವರ್ಷ | ಚಲಾವಣೆಯಲ್ಲಿರುವ ಕರ್ನ್ಸಿ | ಬ್ಯಾಂಕ್‌ಗಳಲ್ಲಿರುವ ನಗದು | ಸಾರ್ವಜನಿಕರ ಬಳಿಯಿರುವ ನಗದು (2-3) | RBI ನಲ್ಲಿ ಇರುವ ಇತರೆ ಠೇವಣೆಗಳು | RBI ನಲ್ಲಿ ಬ್ಯಾಂಕಗಳು ಹೊಂದಿರುವ ಠೇವಣೆಗಳು |
|---|---|---|---|---|---|
| 1981-82 | 154.11 | 9.37 | 144.74 | 1.68 | 54.19 |
| 1991-92 | 637.38 | 26.40 | 610.98 | 8.85 | 348.82 |
| 2001-02 | 2509.74 | 101.79 | 2407.94 | 28.31 | 841.47 |
| 2004-05 | 3686.61 | 123.47 | 3563.14 | 64.54 | 1139.96 |
| 2005-06 | 4295.78 | 174.54 | 4121.24 | 68.43 | 1355.11 |
| 2006-07 | 5040.99 | 212.44 | 4828.54 | 74.67 | 1972.95 |
| 2007-08 | 5908.01 | 223.90 | 5684.10 | 90.27 | 3284.47 |
| 2008-09 | 6911.53 | 257.03 | 6654.50 | 55.33 | 2912.75 |
| 2009-10 | 7995.49 | 320.56 | 7674.92 | 38.06 | 3522.99 |
| 2010-11 | 9496.59 | 378.23 | 9118.36 | 36.53 | 4235.09 |
| 2011-12 | 10672.30 | 435.60 | 10236.70 | 28.22 | 3562.91 |
| 2012-13 | 11909.75 | 499.14 | 11410.61 | 32.40 | 3206.71 |
| 2013-14 | 13010.75 | 552.55 | 12458.19 | 19.65 | 4297.03 |
| 2014-15 | 14483.12 | 621.31 | 13861.82 | 145.90 | 4655.61 |
| 2015-16(P) | 16634.63 | 653.68 | 15980.95 | 154.51 | 5018.26 |

**Source:** *Handbook of Statistics on Indian Economy, Reserve Bank of India, 2015-16*

